55

ಮೀರಾಬಾಯಿ

(ಏಕಾಂಕ ನಾಟಕ)

★

ರಚಯಿತರು:

ಶ್ರೀ| ಸಂ. ಜ. ರಾವ್.

1955.

ಮಂಗಳೂರು.

ಒಂದಾಣೆ ಮಾಲೆ

ಒಂದಾಣೆ ಮಾಲೆಯಲ್ಲಿ ಈ ವರೆಗೆ ಪ್ರಕಟವಾದ ಪುಸ್ತಕಗಳು

೧. *ಕೆಪ್ಪಟಿರಾಯ (ವಿನೋದ ಕಥೆ)
೨. *ನಾರೀಶ್ವರರು (ಏಕಾಂಕ ಪ್ರಹಸನ)
೩. *ಕಳ್ಳನಿಗೆ ಸಂಭಾವನೆ ಮತ್ತು ಇತರ ಕಥೆಗಳು.
೪. *ಸದ್ರಿಸುಬ್ಬ (ಏಕಾಂಕ ಪ್ರಹಸನ)
೫. *ಅದ್ಭುತ ತ್ಯಾಗ ಮತ್ತು ಇತರ ಕಥೆಗಳು
೬. ಚುನಾವಣೆ ಅರ್ಥಾತ್ ಬನಾವಣೆ (ಏಕಾಂಕ ಪ್ರಹಸನ)
೭. *'ಬೀಡಿ ಸೇದಬೇಡಿ' ಮತ್ತು 'ಆ ಮಗು' (ವಿನೋದ ಕಥೆಗಳು)
೮. *ಇಂಗ್ಲಿಷ್-ಕನ್ನಡ ಅರ್ಥಕೋಶ
೯. *ಲಂಚಕ್ಕೆ ಸಂಚಕಾರ
೧೦. *ಟಿಶ್ಯೂ ಔಷಧಿಗಳ ಕೈಪಿಡಿ.
೧೧. *ಶ್ರೀಕ್ಷೇತ್ರ ಧರ್ಮಸ್ಥಳ (ದ್ವಿ. ಮುದ್ರಣ)
೧೨. ಜೀವದ ಮೌಲ್ಯ ಮತ್ತು ಇತರ ಕಥೆಗಳು
೧೩. ಸತ್ತವನ ಸೇಡು ಮತ್ತು ಇತರ ಕಥೆಗಳು
೧೪. ವೆಂಕಟನ ಸಂಕಟ (ಏಕಾಂಕ ಪ್ರಹಸನ)
೧೫. ಬಾಬಿಗೆ ಬಾಸಿಂಗ (ಏಕಾಂಕ ಪ್ರಹಸನ)
೧೬. ವೇಣೂರಿನ ಗತವೈಭವ.
೧೭. ಒಗಟುಗಳು [ದ್ವಿತೀಯ ಮುದ್ರಣ]
೧೮. ಜಗಳಗಂಟೆ ಮತ್ತು ಇತರ ಕಥೆಗಳು
೧೯. ರಥೋತ್ಸವ.
೨೦. ಕರಿನಾಯಿ ಮತ್ತು ಮುಪ್ಪು
೨೧. *ಭಾರತದ ಮಹಾನಗರಗಳು (ಭಾಗ ೧)
೨೨. ತಿರುಕ್ಕುರಲ್
೨೩. ಸೂರ್ಯನ ಸಂಸಾರ ಮತ್ತು ಇತರ ಕಥೆಗಳು.
೨೪. ಭಾರತದ ಮಹಾನಗರಗಳು (ಭಾಗ ೨)
೨೫. ಧೈರ್ಯ ಮತ್ತು ಇತರ ಸತ್ಯಕಥೆಗಳು.
೨೬. *ಮಾರಾವತಾರ (ಏಕಪಾತ್ರ ಯಕ್ಷಗಾನ ಪ್ರಬಂಧ)
೨೭. ಹಾಸವಿಲಾಸ (ನಗೆಹನಿಗಳು)
೨೮. ಸತ್ಯವಂತ ಬಾಬಿ (ಏಕಾಂಕ ಪ್ರಹಸನ)
೨೯. ಜಾಣ್ಮೆಯ ಒಗಟುಗಳು
೩೦. ಜಾತಕ ಕಥೆಗಳು
೩೧ ಕಾರ್ಕಳದ ಚರಿತ್ರೆ
೩೨. ಮರ್ಜಿ (ಏಕಾಂಕ ಪ್ರಹಸನ)
೩೩. ದರ್ಶನದ ಕಥೆಗಳು
೩೪. ಆಳುವಿನ ಹೊಳೆ ಮತ್ತು ಕೇಶವಭೂಪ (ಮಕ್ಕಳ ಕಥೆಗಳು)
೩೫. ಶರಾಬಿನ ಸಿಪಾಯಿಗಳು
೩೬. ಉಪದೇಶ ಶತಕ
೩೭. ನಿಮಗೆ ಗೊತ್ತಿದೆಯೇ?
೩೮. ಚತುರ ಚಮತ್ಕಾರ
೩೯. ಸತೀ ಸಾವಿತ್ರಿ
೪೦. ಆಭರಣಗಳ ಪೆಟ್ಟಿಗೆ, ಇತರ ಕಥೆಗಳು
೪೧. ಭಾರತದ ಮಂತ್ರಿಮಂಡಲಗಳು
೪೨. ಕಾಲುಬಳೆಯ ಕಥೆ
೪೩. ಭಾರತದ ನಾಲ್ಕು ಕಲಶಗಳು
೪೪. ವ್ಯಸನದಿಂದ ಲಾಭ ಮತ್ತು ಇತರ ಕಥೆಗಳು
೪೫. ಸುಭಾಷಿತ
೪೬ ೧೮೫೭ರ "ಸಿಪಾಯಿ ದಂಗೆ" ಅಥವಾ ಬ್ರಿಟಿಷರಿಗೆದುರಾಗಿ ಭಾರತೀಯರ ಸ್ವಾತಂತ್ರ್ಯ ಸಮರ
೪೭. ಅಕಾಂಡ ತಾಂಡವ (ರೇಡಿಯೋ ನಾಟಕ)
೪೮. ಸಾಹಸದ ಕಥೆಗಳು.
೪೯. ಸಂಜ್ಞಾ ಜ್ಞಾನ ಕೋಶ
೫೦. ಪಂಡಿತನ ಪಿಟೀಲು
೫೧. ಭೋಗಯಾತ್ರೆ
೫೨. ಸಂಗ್ರಾಮಸಿಂಹ
೫೩. ಧರ್ಮ ಶಿಕ್ಷಾ
೫೪. ಮಹಾತ್ಮ
೫೫. ಮೀರಾಬಾಯಿ (ಏಕಾಂಕ ನಾಟಕ)

* ಈ ಗುರುತು ಹಾಕಿದ ಪುಸ್ತಕಗಳ ಪ್ರತಿಗಳು ಮುಗಿದಿವೆ.

ಈ ವರೆಗೆ ಐವತ್ತ ಐದು ಪುಸ್ತಕಗಳಲ್ಲಿ, ಐವತ್ತ ಐದು ಆಣೆಗಳಿಗೆ,
'ಒಂದಾಣೆ ಮಾಲೆ'ಯು, ಹೊದಿಕೆ ಕೂಡಿ, 1212 ಪುಟಗಳನ್ನು ಕೊಟ್ಟಿರುತ್ತದೆ.

ಒಂದಾಣೆ ಮಾಲೆ, ಪ್ರಭಾತ ಆಫೀಸು, ರಥಬೀದಿ, ಮಂಗಳೂರು-೧

ಮೀರಾಬಾಯಿ

(ಏಕಾಂಕ ನಾಟಕ)

....

ದೃಶ್ಯ ೧. ಅರಮನೆ.

(ಬಾಲಕಿಯಾದ ಮೀರಾಬಾಯಿಯು, ಆಗತಾನೆ ಮುಳುಗುತ್ತಿರುವ ಸೂರ್ಯನ ರಮಣೀಯತೆಯನ್ನು ನೋಡುತ್ತಾ ನಿಂತಿರುವಳು.)

ಮೀರಾ: ಈ ಸಂಧ್ಯಾಕಾಲವು ಎಷ್ಟು ಮನೋಹರವಾಗಿದೆ! ದಿನ ಮಣಿಯಾದ ಸೂರ್ಯದೇವನೇ, ನಿನ್ನ ಕಿರಣಗಳಿಂದ ಈ ಪ್ರಪಂಚವನ್ನು ಪಾವನವನ್ನಾಗಿ ಮಾಡುವೆ. ವಿಶ್ವದ ಒಡೆಯನಾದ ಪರಮಾತ್ಮನ ತೇಜೋ ಮೂರ್ತಿಯಲ್ಲವೆ ನೀನು? ಭಜನೆಯಿಂದ ಶ್ರೀಕೃಷ್ಣ ಸ್ವಾಮಿಯನ್ನು ಒಲಿಸ ಬಹುದೆಂದು ಹೇಳುವರು. ನಾನು ಮಾಡುತ್ತಿರುವ ಭಜನೆಯು ಸಾಲದೆ? ಇಲ್ಲವಾದರೆ, ನನಗೆ ಒಲಿಯದಿರುತ್ತಿದ್ದನೆ? ಅಥವಾ ಬಾಲಕಿಯಾದ ನನ್ನ ಮನಸ್ಸು ದೃಢವಾಗಿಲ್ಲವೆಂದು ಅವನು ಬಾರದಿರಬಹುದೇ?

ಕಮಲ: (ಸಖಿ) ಮೀರಾ, ಒಬ್ಬಳೇ ಇಲ್ಲೇನು ಮಾಡುತ್ತಿರುವೆ? ಆಡಲು ಬರುವದಿಲ್ಲವೇ?

ಮೀರಾ: ಸಖೀ, ಶ್ರೀಕೃಷ್ಣ ಸ್ವಾಮಿಯ ಧ್ಯಾನಕ್ಕಿಂತಲೂ, ಉತ್ತಮ ವಾದ ಆಟವಾವುದು? ಆತನ ಲೀಲಾವಿನೋದದ ವಿನಹ, ನನಗೆ ಅನ್ಯ ಆಟ ಗಳೇ ಒಗ್ಗಲಾರವು.

ಕಮಲ: ಮೀರಾ, ಅಗೋಚರನಾದ ಕೃಷ್ಣನನ್ನು ಕುರಿತು, ಸದಾ ಕಾಲವೂ 'ಕೃಷ್ಣಾ ಕೃಷ್ಣಾ' ಎಂದು ಹಂಬಲಿಸುವೆಯೇಕೆ? ಅವನು ಏತ ಕ್ಕಾಗಿ? ಅರಮನೆಯಲ್ಲಿ ನಿನಗೇನು ಕೊರತೆಯಾಗಿದೆ?

ಮೀರಾ: ಶ್ಯಾಮಸುಂದರನಾದ ಕೃಷ್ಣನ ರೂಪವನ್ನು ಓದಿಯೂ ಕೇಳಿಯೂ ತಿಳಿದಿರುವೆ. ದಯಾಮಯನಾದ ಆತನನ್ನು ಕಾಣಬೇಕೆಂದು ನಿರಂತರವೂ ಮನಸ್ಸು ಹೊಯ್ದಾಡುತ್ತಿರುವುದು. ಆತನನ್ನು ಕಾಣದೆ ನನ್ನ ಮನಸ್ಸಿಗೆ ಶಾಂತಿಯಿಲ್ಲ. ನನ್ನ ಮನಸ್ಸು ನೆಮ್ಮದಿಯಾಗಿರಬೇಕಾ

ದರೆ ಆ ಭಗವಾನ್ ಮೂರ್ತಿಯು ಧ್ಯಾನದಿಂದ ಮಾತ್ರ ಸಾಧ್ಯ. ನಿಸ್ಸಾರವಾದ ಬೇರಾವ ಆಟವೂ ನನಗೆ ಬೇಕಿಲ್ಲ. ನಡೆ. ತರಳ ಧ್ರುವನಿಗೆ ಒಲಿದ ಕೃಷ್ಣನನ್ನು ತಿರಸ್ಕರಿಸಿದೆಯಾ? ಇರಲಾರದು; ಕೃಷ್ಣನಿಗೆ ಭೇದಭಾವನೆ ಎಲ್ಲಿ ಬಂತು? ದ್ವೇಷಾಸೂಯೆಗಳು ಮಾನವರಲ್ಲಿ ಮಾತ್ರವಲ್ಲವೇ?

ಕಮಲ: ಮೀರಾ, ನಿನ್ನ ಹಂಬಲವು ನಿಷ್ಪ್ರಯೋಜಕ. ನಿನ್ನ ಕೃಷ್ಣನಾದರೋ ಕಣ್ಣಿಗೆ ಗೋಚರಿಸಲಾರ! ಕೈಗೆ ಎಟಕಲಾರ! ಆದರೆ, ನಿನ್ನ ಹಂಬಲವಾದರೋ ದಿನೇ ದಿನೇ ಹೆಚ್ಚುತ್ತಿರುವುದು.

(ಭಜನೆಯು ಸ್ವರವು ಕೇಳಿಬರುವದು.)

ಮೀರಾ: ಕೇಳು, ಕಮಲ! ಸಂತರ ಗಾನವು ಕೇಳಿಬರುತ್ತದೆ. ಪರಮ ಪುರುಷ! ನಿನ್ನ ಧ್ಯಾನದಲ್ಲಿ ಎಂತಹ ಮಾಧುರ್ಯವು ತುಂಬಿದೆ! ಮಹಾತ್ಮರು ಇತ್ತ ಕಡೆ ಬರುವಂತಿದೆ. ಕರೆದು ಸತ್ಕರಿಸುವೆನು.

(ವೃಂದಾವನಕ್ಕೆ ಹೋಗುವ ಸಂತರ ಗುಂಪು ಭಜನೆಮಾಡುತ್ತಾ ಪ್ರವೇಶ.)

ಮೀರಾ: ಇವರನ್ನು ಸತ್ಕರಿಸುತ್ತ, ಭಜನೆಮಾಡುತ್ತ, ಇವರೊಡನೆ ನಾನೂ ಹೋಗುವೆನು. (ಹೊರಡುವಳು.)

ಕಮಲ: ಮೀರಾ, ರಾಜಕುಮಾರಿಯಾದ ನೀನು ಹೀಗೆ ಭಿಕ್ಷುಕರೊಡನೆ ಹೋಗುವದು ಸರಿಯಲ್ಲ. ನಿನ್ನ ಜನನೀ ಜನಕರು, ನಿನ್ನ ಮೇಲೆ ಕೋಪಗೊಳ್ಳುವರು. ಆ ದಿನ ನಿನ್ನಲ್ಲಿ ಆಗ್ರಹಮಾಡಿರುವದನ್ನು ಅಗಲೇ ಮರೆತೆಯಾ?

ಮೀರಾ: ಸಖೀ, ಪರಮಾತ್ಮನೆದುರಿನಲ್ಲಿ ಎಲ್ಲರೂ ಸಮಾನರೇ. ರಾಜಕುಮಾರ, ಭಿಕ್ಷುಕ ಎಂದು ಭೇದವೆಣಿಸುವವರು ಮೂರ್ಖರೇ ಸರಿ! ಈ ಸಂತರು, ನಿತ್ಯವೂ ಕೃಷ್ಣನನ್ನು ಭಜಿಸಿ ಪುನೀತರಾಗಿರುವರು. ಇವರೊಡನೆ ಭಜನೆಮಾಡುವುದರಿಂದ ಹಾನಿತಟ್ಟದು. ಪೂಜ್ಯರೇ, ನೀವೀ ಮಾರ್ಗವಾಗಿ ಎತ್ತ ಹೊರಟಿರುವಿರಿ?

ಸಂತ: ರಾಜಕುವರಿ, ನಿನಗೆ ಆ ಕೃಷ್ಣಸ್ವಾಮಿಯು ಶೀಘ್ರದಲ್ಲಿಯೇ ಒಲಿಯಲಿ! ನಾವು ವೃಂದಾವನಕ್ಕೆ ಹೊರಟಿರುವೆವು.

ಮೀರಾ: ವೃಂದಾವನಕ್ಕೆ ಏಕೆ?

ಸಂತ: ಶ್ರೀಕೃಷ್ಣ ಸ್ವಾಮಿಯ ದರ್ಶನಕ್ಕೆ.

ಮೀರಾ: ಪರಮಾತ್ಮ ದರ್ಶನವಾಗಬೇಕಾದರೆ ವೃಂದಾವನಕ್ಕೆ ಹೋಗಬೇಕೆ? ಇಲ್ಲಿಯೇ ನೋಡಲಾಗದೆ? ಆ ಭಗವಾನ್ ಶ್ರೀಕೃಷ್ಣ ಮೂರ್ತಿಯನ್ನು ನೋಡಬೇಕೆಂಬಾಸೆಯು ನನಗೆ ಬಹಳವಾಗಿರುವದು. ನನ್ನ ಜನಕನು ನನ್ನನ್ನು ವೃಂದಾವನಕ್ಕೆ ಕಳುಹಲಾರನು. ನಾನು ಸ್ವಾಮಿಯನ್ನು ಹೇಗೆ ತಾನೆ ಕಾಣಲಿ?

ಸಂತ: ಮಗಳೇ, ನೀನೆಂತಹ ಮಹನೀಯಳು! ಕೇವಲ ಈ ಚಿಕ್ಕ ವಯಸ್ಸಿನಲ್ಲಿಯೇ ಯೋಗಿಗಳಿಗೂ ನಿಲುಕದ ವೈರಾಗ್ಯಪಥವನ್ನರಸಿರುವೆ!

ಮೀರಾ: ಪೂಜ್ಯರೇ, ಆಶ್ಚರ್ಯವೇನು ಬಂತು? ಪರಮಾತ್ಮನನ್ನು ಬಯಸುವದು ಮಾನವರೆಲ್ಲರಿಗೂ ಸಹಜ ಗುಣವಲ್ಲವೇನು? ಕೃಷ್ಣನನ್ನು ಬಯಸಲಾಗದು ಎಂಬುದು ಮಾತ್ರ ಆಶ್ಚರ್ಯದ ಮಾತಲ್ಲವೇ? ಪೂಜ್ಯರೇ, ಈಗಲಾದರೂ ಹೇಳಿ—ಕೃಷ್ಣನನ್ನು ಕಾಣುವುದೆಂತು? ವೃಂದಾವನದಲ್ಲಿಯೆ ಕಾಣುವೆನೆಂದಾದರೆ ನನ್ನನ್ನೂ ಜತೆಯಲ್ಲಿ ಕರೆದುಕೊಂಡು ಹೋಗಿ.

ಸಂತ: ರಾಜಪುತ್ರಿ, ನೀನು ಹೀಗೆ ಹೇಳಲಾಗದು. ಜಗತ್ತಿಗೆ ಪತಿಯಾದ ಕೃಷ್ಣನನ್ನು ಎಲ್ಲಿ ಬೇಕಾದರೂ ಕಾಣಬಹುದು. ನೀನು ಇರುವೆಡೆಯಲ್ಲಿಯೇ ಆತನನ್ನು ಭಜಿಸು. ನಮ್ಮೊಡನೆ ಬರುವುದು ತರವಲ್ಲ.

ಮೀರಾ: ಸಂತರೇ, ಭಗವಂತನ ಧ್ಯಾನವನ್ನಾದರೂ ಏಕಕಂಠದಿಂದ ಎಲ್ಲರೂ ಭಜಿಸಿರಿ—ಕೇಳಿ ಕರ್ಣಾನಂದವನ್ನು ಉಂಟುಮಾಡಿಕೊಳ್ಳುವೆನು.

(ಮೀರಾ ಹಾಡುವಳು. ಅವಳ ಜತೆಯಲ್ಲಿ ಎಲ್ಲರೂ ಹಾಡುವರು.)

ಸಂತ: ಈ ಮಹಾತ್ಮಳು, ಪರಮ ಭಕ್ತಳು! ಚಿಕ್ಕ ವಯಸ್ಸಿನಲ್ಲಿಯೇ ಎಂಥ ಶ್ರದ್ಧೆ! ಅಮ್ಮಾ ಸುಕುಮಾರಿ, ಈ ಗಾನವನ್ನು ಎಲ್ಲಿ ಕಲಿತೆ?

ಮೀರಾ: ಇಲ್ಲಿಯೇ ಒಂದು ಕೃಷ್ಣ ದೇವಾಲಯವಿದೆ. ಅಲ್ಲಿ ಹಾಡುತ್ತಾ ಅವನಿಂದಲೇ ಈ ಗಾನವನ್ನು ಕಲಿತಿರುವೆ. ನೀವು ಅಲ್ಲಿಗೆ ಬಂದು ನನ್ನನ್ನು ಕೃತಾರ್ಥಳನ್ನಾಗಿ ಮಾಡಬೇಕೆಂದು ಆಶಿಸುವೆ.

ಸಂತ: ಮಗೂ, ನಿನ್ನ ಪ್ರಾರ್ಥನೆಯು ದೊಡ್ಡ ಅನುಗ್ರಹವೇ ಸರಿ. ಭಜನೆಗೆ ಎಲ್ಲ ಕಾಲವೂ ಒಂದೇ. ನಡೆ ಹೋಗೋಣ.

(ಭಜನೆಮಾಡುತ್ತಾ ಹೋಗುವರು.)

ದೃಶ್ಯ ೨.

(ಅರಮನೆಯಲ್ಲಿ ಪುರೋಹಿತ ರಾಮಶಾಸ್ತ್ರಿ ಮುಂತಾದವರ ಪ್ರವೇಶ.)

ಕೃಷ್ಣಶಾಸ್ತ್ರಿ: ನಮಸ್ಕಾರ ಜೋಯಿಸರೇ! ಇತ್ತೀಚೆಗೆ ನಿಮ್ಮನ್ನು ಕಾಣಲೇ ಇಲ್ಲವಲ್ಲ! ಎಲ್ಲ ಕ್ಷೇಮ ತಾನೆ?

ರಾಮ: ಕ್ಷೇಮ, ಶಾಸ್ತ್ರಿಗಳೇ. ಎಲ್ಲಾ ಕ್ಷೇಮ. ಏಕೆ ಇಷ್ಟು ವಿಚಾರಣೆ?

ಕೃಷ್ಣ: ವಿಚಾರಣೆ ಏನೂ ಇಲ್ಲ. ಬೆಳಿಗ್ಗೆ ಎದ್ದೊಡನೆ 'ಎದ್ದಿರಾ?' ಮಧ್ಯಾಹ್ನವಾದಾಗ 'ಊಟವಾಯಿತೇ?' ಎಂದು ಕೇಳುವದು ಸ್ವಾಭಾವಿಕ.

ರಾಮ: ಏನೊ ಇದೆಯಲ್ಲ ಜೀವನೋಪಾಯ. ಸಂಪಾದನೆಗಾಗಿ ವರ್ಷದಿಂದ ಸುತ್ತುತ್ತಲಿದ್ದೇನೆ. ಊರಲ್ಲೆಲ್ಲ ಕ್ಷೇಮವಷ್ಟೆ?

ಕೃಷ್ಣ: ಎಲ್ಲರೂ ಕ್ಷೇಮ. ಆದರೆ, ಊರಿನಲ್ಲಿ ನಡೆಯುವ ಅನ್ಯಾಯ ಎಷ್ಟು ಅಂತ ಮಾತ್ರ ಹೇಳೋಹಾಗಿಲ್ಲ. ಕಾಲ ಕೆಟ್ಹೋಯ್ತು ಸ್ವಾಮಿ!

ರಾಮ: ಅದೇನು ಸ್ವಾಮಿ, ಹಾಗೆ ಹೇಳುತ್ತಾ ಇದ್ದೀರಿ?

ಕೃಷ್ಣ: ಕೇಳಿ ಸಂತೋಷಪಡಿ ಸ್ವಾಮಿ. ಎಲ್ಲಿ ನೋಡಿದರೂ ಸಂತರ ಗುಂಪು! ಪ್ರಾಪ್ತವಯಸ್ಕಳಾದ ರಾಜಕುಮಾರಿ ಅವರೊಡನೆ ಸೇರಿಕೊಂಡು ವಿಶೇಷ ನರ್ತನ! ಮಾನ ಬದಲಾಗಿದೆ, ಮರ್ಯಾದೆ ಎಲ್ಲಿಗೋ ಹೋಗಿದೆ. ಅಡಿಗೆಮನೇಲಿರೊ ಹೆಂಗಸಿಗೆ ಯಾಕೆ ಬೇಕು ಸ್ವಾಮಿ ಈ ಭಜನೆ, ಈ ಕುಣಿತ? ಕಾಲ ಕೆಟ್ಹೋಯ್ತು ಅಂದರೆ ತಪ್ಪೆ?

ರಾಮ: ನೀನು ಹೇಳೋದು ಹಳೇಕಾಲದ ವಿಚಾರ. ಈಗ ಹೆಂಗಸರು ಏಕೆ ಭಜನೆಮಾಡಬಾರದು? ಅಂತಾರೆ. ನನ್ನ ಮಗಳು ರಾಜಕುಮಾರಿ ಗುಂಪಿಗೆ ಸೇರಿದ್ದಾಳೆ. ಅರಮನೆ ಹುಡುಗಿಯ ಸ್ನೇಹ, ಏನಾದರೂ ಲಾಭವಾದೀತು, ಅಂತ ಸುಮ್ಮನೆ ಇದ್ದೀನಿ. ಆದರೆ, ಆ ಹುಡುಗಿ ಮಾತಿಗೆ ಸಾಮ್ರಾಟರು ಉತ್ತರ ಹೇಳೊ ಹಾಗೆ ಇಲ್ಲಾ ಸ್ವಾಮಿ!

ಕೃಷ್ಣ: ಆ ರಾಜಕುಮಾರಿಗೆ ಮದುವೆಮಾಡಿದ್ದರೆ ಈ ರಗಳೆ ಇದ್ದಿಲ್ಲ. ರಾಜಕುಮಾರಿಯು ಮದುವೆ ಬೇಡಾ ಅಂತಿದ್ದಾಳಂತೆ! ಏನು ಮಾಡೋದು ಹೇಳಿ. ಅದೋ, ಯಾರೊ ಬರುವಂತಿದೆ. (ಹೋಗುವರು.)

ದೃಶ್ಯ ೩

(ಮೀರಾಬಾಯಿಯ ಉದ್ಯಾನವನದ ದೇವಸ್ಥಾನ. ಸಂತರೊಡನೆ ಮೀರಾಬಾಯಿಯು ಗಾನಮಾಡುತ್ತಿರುವಳು. ಕಮಲ ಓಡಿಬರುವಳು.)

ಕಮಲ: (ನಿಟ್ಟುಸಿರು ಬಿಟ್ಟು) ಮೀರಾ, ಮಹಾರಾಣಿಯವರು ಇತ್ತ ಬರುತ್ತಿರುವರೆಂದು ಸೇವಕಿಯು ಹೇಳಿದಳು. ಆದುದರಿಂದ ನೀನು ಇವರನ್ನು ಸತ್ಕರಿಸಿ ಬೇಗನೆ ಕಳುಹಿಸಿಕೊಡು.

ಮೀರಾ: ಕಮಲಾ, ನೀನೇಕೆ ಧ್ಯಾನಮಗ್ನಳಾಗಿದ್ದ ನನ್ನನ್ನು ಎಚ್ಚರಿಸಿದೆ? ಆ ಸುಂದರರೂಪನ ಧ್ಯಾನಿಸಿ ಆನಂದಿಸುತ್ತಿದ್ದೆನಲ್ಲವೇ?

ಕಮಲ: ಮೀರಾ, ನಿನಗೆ ನಿರಂತರವೂ ಈ ಒಂದೇ ಚಿಂತೆಯಲ್ಲವೇ? ಬೇರಾವ ಯೋಚನೆಯೂ ಇಲ್ಲ! ದಿನದಿನವೂ ಹೊಸ ಹಾಡುಗಳನ್ನು ಹಾಡುತ್ತಿರುವೆ. ನಿನಗೆ ಕಲಿಸಿದವರು ಯಾರು?

ಮೀರಾ: ಮತ್ತಾರೇ, ನನ್ನ ಹೃದಯೇಶ್ವರನು! ಆ ಮನಮೋಹನ ನನ್ನು ಪ್ರೀತಿಸುವದರ ಅತಿಶಯ ಸೌಭಾಗ್ಯವನ್ನು ನೀನರಿಯೆ. ಸಖೀ, ನೀನು ಕೂಡ ಆತನನ್ನು ಪ್ರೀತಿಸು. ಇದಕ್ಕಿಂತಲೂ ಅತಿಶಯವಾದ ಜ್ಞಾನವನ್ನು ಸಂಪಾದಿಸುವೆ. ಸಖೀ, ಕೃಷ್ಣನಲ್ಲಿ ಮನಸ್ಸಿಟ್ಟರೆ ಇನ್ನಾವ ವಿಷಯಕ್ಕೂ ಮನಃಪರಿವರ್ತನೆಯಾಗದು.

ಕಮಲ: ಮೀರಾ, ನಿನ್ನ ಒಡನಾಡಿಯಾಗಿದ್ದರೂ ಇದನ್ನೆಲ್ಲಾ ನಾನರಿಯೆ. ನನಗೆ ನೀನಾಡುವ ಮಾತುಗಳ ಅರ್ಥವೇ ಆಗದು.

ಮೀರಾ: ಪ್ರಿಯ ಸಖೀ, ಇದೇನು? ಮೂಢ ಸ್ತ್ರೀಯಾದ ಮಾತ್ರಕ್ಕೆ ಕುಂದೇನು? ಸ್ವಭಾವತಃ ಪ್ರೇಮಮಯರಾದ ಸ್ತ್ರೀಯರಿಗೆ ಪರಮಾತ್ಮನನ್ನು ತಿಳಿಯುವದು ಸುಲಭವಲ್ಲವೇ? ಪರಮಾತ್ಮನನ್ನು ತಿಳಿಯುವುದಕ್ಕೆ ನಿಷ್ಕಲಂಕತೆ ಮಾತ್ರ ಸಾಕು. ಸ್ತ್ರೀಯರನ್ನು ಚಂಚಲೆಯರೆಂದು ಕರೆಯುವದು ಲೋಕದ ಉತ್ಪ್ರೇಕ್ಷೆ. ನಮಗಿರುವ ಮನೋದಾರ್ಢ್ಯವು ಪುರುಷರಿಗಿಲ್ಲ! ಸ್ತ್ರೀಯಾದ ಮಾತ್ರಕ್ಕೆ ಆತ್ಮತೇಜಸ್ಸು ಇಲ್ಲದವಳಾದಾಳೆ? ನಿನ್ನ ಹೃದಯ ಕಮಲದಲ್ಲಿಯೂ ಶ್ರೀಕೃಷ್ಣನನ್ನು ಧ್ಯಾನಿಸಿ ನೋಡು, ಆಗ ತಿಳಿಯುವೆ.

ಕಮಲ: ಮೀರಾ, ಪುನಃ ಹೇಳುತಿದ್ದೇನೆ—ನಿನ್ನ ಜನನಿಯು ಇತ್ತ ಬರುವಂತಿದೆ. (ರಾಣಿಯ ಪ್ರವೇಶ).

ರಾಣಿ: (ಬಂದು) ಇದೇನು ಹುಚ್ಚಳಂತೆ ಕುಣಿದಾಡುತ್ತಿರುವೆ ಮೀರಾ? ಇದು ನಿನ್ನ ಗೌರವಕ್ಕೆ ತಕ್ಕುದೇ? ನಿನ್ನ ಈ ನಡತೆಯು ಸರಿಯಲ್ಲ.

ಮೀರಾ: ಅಮ್ಮಾ, ನಮಸ್ಕರಿಸುವೆ! ಪರಮಾತ್ಮನ ಚಿಂತನೆಯಲ್ಲಿದ್ದ ನನಗೆ ನೀವು ಬಂದುದರ ಅರಿವಾಗಲಿಲ್ಲ. ಕ್ಷಮಿಸಿರಿ!

ರಾಣಿ: ಮೀರಾ, ಮುದ್ದು ಕುವರಿ! ನೀನು ಹೀಗೆಲ್ಲಾ ಮೈಮರೆತು, ಕುಣಿಯಲಾಗದು. ಮಗೂ! ಜನ ಏನಂದಾರು! "ರಾಜಕುವರಿಯು ಭಿಕ್ಷುಕರೊಡನೆ ಭಜನೆ ಮಾಡುತ್ತಾ ತಿರುಗುವಳು" ಎಂದರೆ, ಎಂಥ ಅವಮಾನ ನೋಡು. ಧರ್ಮಪ್ರಭುವಿನ ಮಗಳೇ ಹೀಗಾದ ಮೇಲೆ, ದೇಶದಲ್ಲಿ ಧರ್ಮವೆಲ್ಲಿ ನಿಂತೀತು ಎಂದು ಮನನೋಯುವ ಮಾತುಗಳ ನ್ನಾಡುವರು. ನಿನಗೆ ತಿಳಿಯದೇ?

ಮೀರಾ: ಅಮ್ಮಾ, ಯಾವ ರಾಜನ ಕಾಲದಲ್ಲಿ ಜನರು ರಾಜನಿಂದೆ ಮಾಡದೆ ಇದ್ದರೆಂದು ಒಮ್ಮೆ ಹೇಳು. ಶ್ರೀರಾಮನ ರಾಜ್ಯದಲ್ಲಿಯೂ ಅಗಸರವನೊಬ್ಬ ಸ್ವಾಮಿನಿಂದೆಯನ್ನು ಮಾಡಿದ್ದನಂತೆ ಎಂದ ಮೇಲೆ ಇತಿಹಾಸಕಾಲದಿಂದಲೂ ನಿಂದೆಯನ್ನು ಮಾಡದೆ ಇದ್ದ ಪ್ರಜರಿಲ್ಲ. ಅವರ ಮಾತುಗಳಿಗೆ ಮನನೋಯಿಸಿಕೊಳ್ಳದ ರಾಜರು ಇರಲಾರರು. ಅಮ್ಮಾ ನೀನೆ ಹೇಳು. ಆಧಾರರಹಿತವಾದ ನಿಂದೆಯಿಂದ ನಮಗಾಗುವ ಕುಂದೇನು? ಪರಮಾತ್ಮನನ್ನು ಧ್ಯಾನಿಸುವ ನಾನು, ಪಾಪಿಯೇ? ಅಥವಾ ಪುಣ್ಯಶಾಲಿ ಎಂಬುದನ್ನು ಯೋಚಿಸಿ ಹೇಳು.

ರಾಣಿ: ನಿನ್ನ ಈ ವಾದವು ನನಗೆ ಬೇಕಿಲ್ಲ. ಜನಾಪವಾದವನ್ನು ನಾನು ಸಹಿಸಲಾರದಂತಾಗಿರುವೆ. ಶ್ರೀರಾಮನಾದರೂ ಅಪವಾದಕ್ಕೆ ಹೆದರಿ ಸೀತೆಯನ್ನು ಕಾಡಿಗೆ ಕಳುಹಲಿಲ್ಲವೇ? ಇಂತಹ ಮಹಾತ್ಮರುಗಳಿಂದ ಪವಿತ್ರವಾದ ಭಾರತಭೂಮಿಯಲ್ಲಿ ಜನ್ಮವೆತ್ತಿ ಅವರ ಕೀರ್ತಿಗೆ ಕಳಂಕ ವನ್ನುಂಟುಮಾಡುವುದು ವಿಹಿತವೇ?

ಮೀರಾ: ಅಮ್ಮಾ, ರಾಮಚಂದ್ರನು ಅಗಸನ ಮಾತಿಗಾಗಿ ಸೀತಾ ದೇವಿಯನ್ನು ಕಾಡುಪಾಲುಮಾಡಿರುವದು ನ್ಯಾಯುವೆಂದೆನಿಸುವದೇ? ಆಕೆ ಯನ್ನು ನಗರದಿಂದ ಓಡಿಸುವದು ಜನಸಮ್ಮತವಾಗಿತ್ತೇ? ಅದಿರಲಿ. ನನ್ನೀ ನಡತೆಯಿಂದ ಪವಿತ್ರವಾದ ಭಾರತಭೂಮಿಗಾಗಲೀ ರಾಜಪುತ್ರಕುಲಕ್ಕಾ ಗಲೀ ಅಪವಾದವು ಬರಲಾರದು. ವಿಶ್ವರೂಪಿಯಾದ ಪರಮಾತ್ಮನನ್ನು

ಧ್ಯಾನಿಸಿದವರು ಯೋಗಿಗಳೆಂದು ಪೂಜಿಸಲ್ಪಡುತ್ತಿರುವಾಗ, ನನಗೆ ಮಾತ್ರ ಈ ಅಪವಾದವೇಕೆ?

ರಾಣಿ: ಸ್ತ್ರೀಯರಿಗೆ ವಿದ್ಯಾಜ್ಞಾನವು ಯಾವಾಗ ಉಂಟಾಗುವದೋ ಆಗ ಅವರು ಮಿತಿಮೀರಿ ನಡೆಯುವರು. ಇವಳೊಡನೆ ಚರ್ಚಿಸುವದು ಅಸಾಧ್ಯ! ಪ್ರೀತಿಯ ಒಬ್ಬಳೆ ಮಗಳಾದ ಇವಳ ನಡತೆಯನ್ನು ಹೇಗೆ ಸಹಿಸಲಿ? ನಾಲ್ಕು ಜನರ ಮುಂದೆ ಹೇಗೆ ಬಾಳಲಿ?

ಮೀರಾ: ಜನನೀ, ಏತಕ್ಕೆ ಚಿಂತಿಸುವೆ? ನಮ್ಮ ಕರ್ಮಗಳಿಗೆ ನಾವು ಅಧಿಕಾರಿಗಳು. ಈ ಜನ್ಮವನ್ನು ಸಾರ್ಥಕಪಡಿಸಲಾರದೆ, ನಾಲ್ಕಾರು ಜನರಂತೆ ನಾವೂ ಹೋಗಬೇಕೆನ್ನುವದು ಧರ್ಮವೇ? ಧರ್ಮಸೂಕ್ಷ್ಮವನ್ನರಿತು ಅದನ್ನು ಸಾಧಿಸುತ್ತಾ ಯಾವ ಆತಂಕಗಳು ಬಂದರೂ ಎದೆಗೆಡದೆ ಸತ್ಯ ಸಂಕಲ್ಪವನ್ನೇ ಸಾಧಿಸುವವರು ಸಾಧುಗಳಲ್ಲವೇ? ಪರಮಾತ್ಮನೆನ್ನುವಿರಿ! ಸಾಧುಗಳನ್ನು ಪೂಜಿಸುವಿರಿ! ಅವರ ದಾರಿಯಲ್ಲಿ ನಡೆವವರನ್ನು ದೂಷಿಸುವಿರಿ! ನಾನೇಕೆ ಯೋಗಿನಿಯಾಗಬಾರದು? ನಾನು ಕೃಷ್ಣನನ್ನು ಧ್ಯಾನಿಸುತ್ತಾ ಇದ್ದರೆ ಸಂಸಾರವೆಲ್ಲ ನಿಸ್ಸಾರವಾಗಿ ತೋರುವದು. ನಾನು ಆತನ ಧ್ಯಾನವನ್ನು ಬಿಡಲಾರೆ ಇದು ನನ್ನ ಸತ್ಯ ಸಂಕಲ್ಪ.

ರಾಣಿ: ಇದೋ ನಿನ್ನ ತಂದೆಯವರು ಬರುತ್ತಿರುವರು. ಅವರಿಗೂ ತಿಳಿಸಿಬಿಡು ನಿನ್ನ ಸಂಕಲ್ಪವನ್ನು.

(ರಾಜನ ಪ್ರವೇಶ; ಮೀರಾ ಆತನನ್ನು ಎದುರ್ಗೊಂಡು ನಮಸ್ಕರಿಸುವಳು.)

ರಾಜ: ಮಗೂ, ನಿನಗೆ ಭಗವಂತನು ಮಂಗಲವನ್ನುಂಟುಮಾಡಲಿ! ಇತ್ತ ಬಾ ಕಂದ! ನಮ್ಮ ಮಂತ್ರಿಗಳು ಭಾರತವನ್ನೆಲ್ಲಾ ಸಂಚರಿಸಿ ಅನೇಕ ರಾಜಪುತ್ರರ ಭಾವಚಿತ್ರಗಳನ್ನು ತಂದಿರುವರು. ಇವುಗಳಲ್ಲಿ ನಿನಗೊಪ್ಪುವ ರಾಜಕುಮಾರನನ್ನು ವರಿಸಬಹುದು.

ಮೀರಾ: (ನಕ್ಕು) ತಂದೆಯೇ, ನನ್ನ ಈ ಮನಸ್ಸು ಕೃಷ್ಣನಲ್ಲಿ ಸೇರಿ ಹೋಗಿರುವುದು. ಹೀಗಿರುವಲ್ಲಿ ಈ ಭಾವಚಿತ್ರಗಳಿಂದ ನನಗೆ ಪ್ರಯೋಜನವಾಗದು. ನನ್ನ ಹೃದಯದಲ್ಲಿ, ಮುರಲೀಧರನು ಸದಾ ಬೆಳಗುತ್ತಿರುವನು.

ರಾಜ: ಮೀರಾ, ಇದೇನು ಹೇಳುತ್ತಿರುವೆ? ವಿವಾಹ ವಯಸ್ಕಳಾದ ನಿನಗೆ ವಿವಾಹ ಬೇಡವೆ? ನಾಳೆ ಪ್ರಜೆಗಳೇನೆಂದಾರು! ಧರ್ಮಪ್ರಭುವಾದ ರಾಜನೇ ಕುಲಧರ್ಮಗಳನ್ನು ಮೀರಿ ನಡೆದರೆ ರಾಜ್ಯದಲ್ಲಿ ಧರ್ಮಸ್ಥಾಪನೆಯಾಗುವದೆಂತು?

ವಿೂರಾ: ಅಪ್ಪಾಜಿ, ಹುಟ್ಟಿದ ಹೆಣ್ಣುಮಕ್ಕಳೆಲ್ಲಾ ವಿವಾಹವಾಗಬೇಕೆಂದು ಯಾವ ಧರ್ಮವು ಸಾರಿದೆ? ನಿತ್ಯಬ್ರಹ್ಮಚಾರಿಗಳಾದ ಪುರುಷರು ಇಲ್ಲವೇ? ಅವರಂತೆ ನಾನೂ ಏಕೆ ಇರಲಾಗದು? ನನ್ನ ಹೃದಯವನ್ನು ಅರಿಯದವರು ನನ್ನನ್ನು ಪಾಪಿಯೆಂದು ದೂಷಿಸುತ್ತಿರಬಹುದು; ನನ್ನನ್ನು ಅರಿತವರು, ನಾನು ಭಾಗ್ಯವಂತಳೆನ್ನುವರು. ನನಗೆ ಈ ಜಗತ್ತೇ ನಿಸ್ಸಾರವಾಗಿ ತೋರುತ್ತಿರುವದು. ಆದುದರಿಂದ ನಾನು ಪರಮಾತ್ಮನನ್ನಾರಾಧಿಸುತ್ತಾ ಕಾಲ ಕಳೆಯುವೆ.

ರಾಜ: ವಿೂರಾ, ನೀನು ಶುದ್ಧ ಅವಿವೇಕಿ. ನಿನ್ನ ದೆಸೆಯಿಂದಾಗಿ ನಾನು ಜನಾನುರಾಗವನ್ನು ಕಳೆದುಕೊಂಡು ದೂಷಿತನಾಗಿರುವೆನು. ಯಾವಳಿಂದ ನನ್ನ ಮನೆಯು ಆನಂದಮಯವಾಗುವದೆಂದು ತಿಳಿದಿದ್ದೆನೊ, ಅವಳಿಂದಲೇ ನನ್ನ ರಾಜ್ಯವು ದೋಷದೃಷ್ಟಿಯಿಂದ ನೋಡಲ್ಪಡುವುದು! ನೀನು ಹಿರಿಯರ ಮಾತಿಗೆ ಅಲಕ್ಷ್ಯಮಾಡಿದೆಯಾದರೆ ನಿನ್ನನ್ನು ದೇಶಭ್ರಷ್ಟಳನ್ನಾಗಿ ಮಾಡಿಯೇ ನ್ಯಾಯಪರಿಪಾಲನೆಮಾಡಬೇಕಾಗುವುದಲ್ಲವೆ?

ವಿೂರಾ: ಅಪ್ಪಾ, ಕುಪಿತನಾಗಿ ನಿನ್ನನ್ನು ನೀನೆ ನೋಯಿಸಿಕೊಳ್ಳಬೇಡ! ಈ ಸಂತುಷ್ಟವಾದ ದೇಹಕ್ಕೆ ದೇಶವೇನು? ಅರಮನೆಯೇನು? ಅರಣ್ಯವೇನು? ಎಲ್ಲವೂ ಒಂದೇ. ನನ್ನನ್ನು ಹಾಗೆ ದೇಶಭ್ರಷ್ಟಳನ್ನಾಗಿ ಮಾಡಿಸುವದರಿಂದ ನಿನ್ನ ಮನಸ್ಸಿಗೆ ಶಾಂತಿಯು ಲಭಿಸುವದಾದರೆ, ನಾವಕಾಶವೇಕೆ?

ರಾಜ: ನೀನು ಹೀಗೆ ವಾದಮಾಡುವದರಿಂದ ನನ್ನ ಕೋಪವು ಅಧಿಕವಾಗುತ್ತಿದೆ. ಇದರಿಂದ ನಿನಗೆ ಕೆಡುಕುಂಟಾಗುವದು ನಿಶ್ಚಿತ!

ವಿೂರಾ: ಜನಕ! ಜಗದ ಪ್ರತಿಯೊಬ್ಬ ಮಾನವನಿಗೂ ಒಂದೊಂದು ಮನೋಧರ್ಮವಿದೆ. ನೀನು, ನಿನ್ನಲ್ಲಿರುವ ರಾಜಧರ್ಮವನ್ನು ಪ್ರಯೋಗಿಸು. ನನ್ನ ಮನಸ್ಸಿನ ಧರ್ಮವನ್ನು ಮಾತ್ರ ಬದಲಿಸಲಾರೆ!

ರಾಜ: (ರಾಣಿಯ ಕಡೆ ತಿರುಗಿ) ದೇವಿ, ಈ ಮೂರ್ಖಳಿಂದ ನೀನು ಘಾಸಿಯಾಗಿರುವೆ. ಇವಳಿಂದ ನಮಗುಂಟಾಗಿರುವ ಅಪವಾದವನ್ನು ದೂರಿಕರಿಸಬೇಕಾದರೆ, ಇವಳಿಗೆ ವಿಷಪಾನವನ್ನು ಮಾಡಿಸುವುದೇ ಸರಿ.

ರಾಣಿ: ಪ್ರಾಣಪ್ರಿಯ, ಎಂಥ ಮಾತಿದು! ಇವಳು ನನ್ನ ನಿನ್ನ ಮಗುವಲ್ಲವೆ? ಇವಳ ಅಪರಾಧವನ್ನು ಕ್ಷಮಿಸು.

ರಾಜ: ಅದು ನ್ಯಾಯ. ಅದಕ್ಕೆ ಎಲ್ಲರೂ ತಲೆಬಾಗಲೇಬೇಕು. ಆಜ್ಞಾಭಂಗವನ್ನು ನಾನು ಸೈರಿಸಲಾರೆ. ಬೇಗನೇ ನನ್ನ ಆಜ್ಞೆಯನ್ನು ನೆರವೇರಿಸು. ಯಾರಲ್ಲಿ? ಈ ಅವಿಧೇಯಳಿಗೆ ಕೊಡಲು ಉಗ್ರವಿಷವನ್ನು ತೆಗೆದುಕೊಂಡು ಬಾ! (ಸೇವಕನು ಬಂದು, ನಮಿಸಿ, ಹೋಗಿ, ವಿಷದ ಬಟ್ಟಲು ತರುವನು.)

ರಾಣಿ: ಭಗವಂತಾ, ಬಹುಕಾಲ ಮಕ್ಕಳಿಲ್ಲದೆ ಮಕ್ಕಳ ಸುಖಕ್ಕಾಗಿ ನಿನ್ನನ್ನು ಬೇಡಿ ಪಡೆದ ಮಗಳಿಗೆ, ಅವಳ ಹಟಕ್ಕಾಗಿ ವಿಷಪಾನವನ್ನು ತಾಯಿಯಾದ ನಾನೇ ಮಾಡಿಸಬೇಕಾಯಿತೇ? ಮೀರಾ, ನೀನಾದರೂ ನಿನ್ನನ್ನು ಹೊತ್ತು ಹೆತ್ತು ಸಾಕಿ ಸಲಹಿದ ಜನನಿಯ ಮಾತಿಗೆ ಮನ್ನಣೆ ಕೊಟ್ಟು ನಿನ್ನ ಸಂಕಲ್ಪವನ್ನು ತ್ಯಜಿಸು!

ಮೀರಾ: ಜನನೀ, ದುಃಖಿಸಬೇಡ! ಪರಮಪುರುಷನ ಸಂಕಲ್ಪವಿಲ್ಲದೆ ಜಗತ್ತಿನಲ್ಲಿ ಏನೂ ನಡೆಯಲಾರದು. ಆತನ ಲೀಲೆಗಳು ನಮಗೆ ಗೋಚರಿಸಲಾರವು. ನೀನೆ ಯೋಚಿಸು. ಆತನ ಚಿತ್ತವಿದ್ದಂತಾಗಲಿ! ಕೊಡು, ನಾನೇ ಕುಡಿಯುವೆನು. (ವಿಷದ ಬಟ್ಟಲನ್ನು ತೆಗೆದುಕೊಳ್ಳುವಳು.) ಕೃಷ್ಣ! ಪ್ರೇಮಸಾಗರ! ನನಗಿರುವ ಕೃಪೆಯು ನಿನ್ನ ದರ್ಶನವಿಲ್ಲವೆಂಬುದೇ ಆಗಿದೆ. ಆದ್ದರಿಂದ ನೀನು ವಿಷರೂಪಿಯಾಗಿ ನನ್ನ ಹೃದಯದಲ್ಲಿ ಸೇರಿ ನನ್ನ ದಾಹವನ್ನು ಅಡಗಿಸು. ಪ್ರಪಂಚವೆಲ್ಲಾ ನಿನ್ನದಾಗಿರುವದು. ಇದು ಪ್ರಪಂಚದ ಒಂದು ರೀತಿ ಪ್ರೀತನಾಗು! ಪಾಲಿಸು!

(ವಿಷಪಾನ ಮಾಡುವಳು. ಕೃಷ್ಣ ವಿಗ್ರಹದ ಕಂಠವೆಲ್ಲ ನೀಲವಾಗುವದು.)

ರಾಜ: (ಆಶ್ಚರ್ಯ) ಏನಿದು, ಈ ಕೃಷ್ಣವಿಗ್ರಹದ ಕಂಠವು ನೀಲವರ್ಣವಾಗಿರುವದು! ಬಾಲಕಿಯು ಧ್ಯಾನಮಗ್ನಳಾಗಿ ಕ್ಷೇಮದಿಂದ ನಿಂತಿರುವಳು! ಇವಳ ಭಕ್ತಿಯೂ ಧೈರ್ಯವೂ ಅನಾದೃಶವಾದುದು! ಈಕೆಗಾಗಿ ಭಗವಂತನೇ ವಿಷಪಾನವನ್ನು ಮಾಡಬೇಕಾದರೆ ಈಕೆ ಭಗವತಿಯೇ ಸರಿ! ಇಂತಹಳನ್ನು ಮಗಳೆಂದು ಭ್ರಮಿಸಿದೆನಲ್ಲ! ದೇವ, ಪ್ರಪಂಚವನ್ನು ಉರಿಯುವ ವಿಷಜ್ವಾಲೆಯಿಂದ ಕಾಪಾಡುವದಕ್ಕಾಗಿ ಶಂಕರನು ವಿಷಪಾನಮಾಡಿದನು! ಕೃಷ್ಣಾ, ನೀನಾದರೂ ಒಬ್ಬ ಭಕ್ತಳ ಉದ್ಧಾರಕ್ಕಾಗಿ ವಿಷವನ್ನು ಧರಿಸಿದೆ! ನನ್ನ ಅಪರಾಧವನ್ನು ಕ್ಷಮಿಸು! ಮಗಳೇ, ಪ್ರೇಮಮಯವಾದ ಹೃದಯವನ್ನೊಳಗೊಂಡ ನೀನು ಕೂಡ ನನ್ನನ್ನು ಕ್ಷಮಿಸು!

ಮೀರಾ: (ಕಣ್ಣೀರು ತುಂಬಿ) ಅಪ್ಪಾಜಿ, ಈ ಕಣ್ಣೀರ ಹನಿಗಳು ಆನಂದಬಾಷ್ಪಗಳು! ಕರುಣಾಮಯನಾದ ಸ್ವಾಮಿಯು ವಿಷವನ್ನು ಅಮೃತವನ್ನಾಗಿ ಮಾಡಿ ನನ್ನಲ್ಲಿ ಅಮೃತರೂಪಿಯಾಗಿ ಸೇರಿಹೋದನು! ನೀನು ಆತನ ಮಹಿಮೆಯನ್ನು ತಿಳಿಯದಾದೆ. ಈ ದೇವಕಿಪ್ರಿಯ ಬಾಲನಲ್ಲದೆ ಮತ್ತಾರನ್ನು ತಾನೇ ಬಯಸೀತು.

ದೃಶ್ಯ ೪. (ದೇವಸ್ಥಾನ.)

(ಪುರನಿವಾಸಿಗಳೆಲ್ಲಾ ಭಜನೆ ಮಾಡುತ್ತಾ ಪ್ರವೇಶಿಸುವರು. ಅಕ್ಬರ್-ತಾನಸೇನ ಇಬ್ಬರೂ ನಿಂತು ನೋಡುತ್ತಿರುವರು.)

ತಾರಾ: ಸಖೀ, ನೀರದೆ, ನೋಡಿದೆಯಾ? ಈ ಕೃಷ್ಣನ ವೈಭವ! ಚಿತ್ತೂರಿನ ಸೌಭಾಗ್ಯಲಕ್ಷ್ಮಿಯು ಇಲ್ಲಿಯೇ ಮೈವೆತ್ತು ಬಂದಂತೆ ತೋರುವುದು ನಿಜ! ಪರಮಭಾಗವತಳಾದ ಮೀರಾದೇವಿಗೆ ಪ್ರಿಯವಾಗಿರುವ ಈ ದೇವಾಲಯಕ್ಕೆ ಏನು ತಾನೆ ಕೊರತೆಯಿರಲು ಸಾಧ್ಯ? ದಿನನಿತ್ಯವೂ ಆಕೆಯ ಗಾನಸುಧೆಯನ್ನು ಸೇವಿಸಿ ಆನಂದದಿಂದ ಹೋಗುವೆನು. ಅವಳಲ್ಲಿರುವ ಅಪೂರ್ವ ತೇಜಸ್ಸು, ರೂಪ, ಗಾನಮಾಧುರ್ಯವನ್ನು ಕಂಡರೆ ಅವಳು ಮಾನವಳಲ್ಲ, ಭಗವತಿಯೇ ಸರಿಯೆಂದು ಖಚಿತವಾಗುವುದು.

ನೀರದೆ: ತಾರಾ, ಚೆನ್ನಾಯಿತು! ನೀನೂ ಮೀರಾದೇವಿಯ ಶಿಷ್ಯಳಾಗುತ್ತಲಿರುವೆ! ನೀನು ಕೂಡ ಅವಳಂತೆ ಉನ್ಮತ್ತಳಾಗುವಿಯೋನೋ ಕಾಣೆ! ಚಿತ್ತೂರೆಲ್ಲವೂ ಮೀರಾಬಾಯಿ ಗಾನಸೌಭಾಗ್ಯದಿಂದ ಬೆರಗಾಗಿ ವೈರಾಗ್ಯ ಮಾರ್ಗದಲ್ಲಿ ಹೊರಡುವುದಾದರೆ ಮನೆಮಕ್ಕಳ ಗತಿಯೇನು? ನಮ್ಮ ಮುಂದಿನ ರಾಣಿ ಮೀರಾಬಾಯಿಯು ವಿವಾಹವನ್ನೇ ಆಗುವುದಿಲ್ಲವೆನ್ನುತಿದ್ದವಳು,— ತಂದೆತಾಯಿಗಳು ಬಲಾತ್ಕಾರ ಪಡಿಸಿದುದರಿಂದ ರಾಣಾಕುಂಭನನ್ನು ನೆಪಮಾತ್ರಕ್ಕೆ ವರಿಸಿದಳಂತೆ. ಆಕೆ ಸದಾಕಾಲವೂ ದೇವಸ್ಥಾನದಲ್ಲಿಯೇ ಇರುತ್ತಾಳೆ. ರಾಜನಾದರೂ ಪ್ರಾರಂಭದಲ್ಲಿ ಆಕೆಯು ಹೇಳಿದ ನಿಬಂಧನೆಗಳಿಗೊಪ್ಪಿಕೊಂಡು ವಿವಾಹ ಮಾಡಿಕೊಂಡನು. ಯಾವಾಗಲೂ ಹೀಗೆಯೇ ನಡೆಯಲು ಸಾಧ್ಯವೇ? ಇದು ಎಲ್ಲರಿಗೂ ಸಾಧ್ಯವೇ? ನಮ್ಮ ಸಂಸಾರ ನಮಗೆ ಇದ್ದೇ ಇದೆ.

ತಾರಾ: ನೀರದೆ, ನಿನ್ನ ಪರಿಹಾಸವು ಸಾಕು. ಮಾನವ ಜನ್ಮಕ್ಕೆ

ಸುಹೃದಯವು ಸಾರ್ಥಕವಲ್ಲವೇ? ವೈರಾಗ್ಯವೆಂದರೆ ಶುದ್ಧ ಮಾನಸವುಂಟಾಗುವುದೇ? ಹೇವಿ, ಗಾಯನವು ಶುದ್ಧಮಾನಸವನ್ನುಂಟು ಮಾಡುವುದು.

(ಮಂದಿರದಲ್ಲಿ, ಎಲ್ಲರೂ ಸೇರಿ ಭಜನೆ ಮಾಡುವರು.)

ಅಕ್ಬರ್: ಮಿತ್ರಾ, ಸುಪ್ರಸಿದ್ಧ ಚಿತ್ತೂರು ದೇವಾಲಯವಿದಲ್ಲವೇ? ಅದೋ, ಗುಂಪುಗುಂಪಾಗಿ ಜನರೆಲ್ಲಾ ಬರುತ್ತಿರುವರು. ಈ ನಗರವೆಲ್ಲವೂ ಮೀರಾದೇವಿಯ ಕೀರ್ತಿ ಕಾಂತಿಯಿಂದ ಪವಿತ್ರವಾಗಿದೆ. ನಗರವೆಲ್ಲವೂ ಸಂತೋಷಭರಿತವಾಗಿದೆ.

ತಾನಸೇನ: ಮಹಾಪ್ರಭು, ಭಾರತ ಸಾಮ್ರಾಜ್ಯದ ನಾಯಕರಾದ ತಾವು, ವೇಷಾಂತರದಿಂದ ಚಿತ್ತೂರಿಗೆ ಬರುವ ಕಾರಣವೇನೋ!

ಅಕ್ಬರ್: ನೀನು ಸಂಗೀತ ಕವಿಯಾಗಿರುವಿ. ಮಾನವಹೃದಯದಲ್ಲಡಗಿರುವ ದಿವ್ಯತೇಜಸ್ಸನ್ನು ಕಾಣಬಲ್ಲವನು. ನೀನೇ ಊಹಿಸು.

ತಾನ: ಭಾರತದ ಸೌಂದರ್ಯಾತಿಶಯಗಳನ್ನು ಕಾಣುವುದಕ್ಕಾಗಿ ಹೀಗೆ ಬಂದಿರಬಹುದಲ್ಲವೇ?

ಅಕ್ಬರ್: ಮಿತ್ರಾ, ಭಾರತದ ಸೌಂದರ್ಯವು ನೋಡತಕ್ಕದ್ದೇ ಸರಿ! ಆದರೂ ಅದಕ್ಕಿಂತಲೂ ಹೆಚ್ಚಿನ ಭಾಗ್ಯವನ್ನರಸುತ್ತಾ ಈ ಲಕ್ಷ್ಮೀನಿವಾಸಕ್ಕೆ ಬಂದಿರುವೆನು.

ತಾನ: ರಾಜಾ; ನಿನ್ನ ಅಭಿಪ್ರಾಯವನ್ನು ತಿಳಿದೆನು. ಮೀರಾಬಾಯಿಯ ಗಾನವನ್ನು ಅವಳ ಬಾಯಿಯಿಂದಲೇ ಕೇಳಿ ಆನಂದಿಸುವುದಕ್ಕಲ್ಲವೇ? ಮೊಗಲ ಬಾದಷಹನು, ಢಿಲ್ಲಿಯ ಸಿಂಹಾಸನವನ್ನಿಳಿದು, ಪಾದಾಚಾರಿಯಾಗಿ ಚಿತ್ತೂರಿಗೆ ಬಂದಿರುವರು. ಇದು ಆಶ್ಚರ್ಯವೇ ಸರಿ! ಯಾವ ರಾಜನ ಸಭೆಯು ಕವಿಶ್ರೇಷ್ಠರಿಂದಲೂ, ಗಾಯನ ಶಿರೋಮಣಿಗಳಿಂದಲೂ ಕೂಡಿರುವುದೊ, ಅಂಥ ಭಾರತೇಶ್ವರನು, ಓರ್ವ ಸ್ತ್ರೀಯ ಗಾನಕ್ಕಾಗಿ ಚಿತ್ತೂರಿಗೆ ಬರಬೇಕೆ? ಚಿತ್ತೂರಿನ ರಾಜನನ್ನು ಸೋಲಿಸಿ, ರಾಣಿಯನ್ನು ಢಿಲ್ಲಿಗೆ ಕರೆಯಿಸಬಹುದಿತ್ತಲ್ಲವೇ?

ಅಕ್ಬರ್: ಕವಿಶ್ರೇಷ್ಠನಾದಂತಹ ನೀನು, ಸಾಮಾನ್ಯನಂತೆ ಮಾತಾಡಬಹುದೇ? ಅಕ್ಬರನ ಮುಖ್ಯ ಉದ್ದೇಶವು—ಭಾರತಭೂಮಿಯನ್ನು ಶಾಂತಿರಸದಿಂದ ತುಂಬಿ, ಹಾಹಾಕಾರ ಮಾಡುವವರ ಹೃದಯಗಳಲ್ಲಿ ಶೀತವನ್ನು ಉಂಟುಮಾಡಬೇಕೆಂದಲ್ಲದೆ, ಸ್ವಾರ್ಥಪರವಾಗಿ ಹೋರಾಡಿ ಭಾರತವೀರ

ರಮಣಿಯರಿಗೆ ಅವಮಾನಪಡಿಸಬೇಕೆಂದಲ್ಲ. ಭಾರತಭೂಮಿಯ ಶ್ರೇಯಸ್ಸಿಗೆ ಕಾರಣರಾದವರು, ಇಲ್ಲಿನ ಶುದ್ಧಮಾನಸರಾದ ಮಹಿಳೆಯರಲ್ಲವೇ? ಮಾನಿನಿಯರಿಗೆ ಅವಮಾನಪಡಿಸಿದರೆ, ದೇವತೆಗಳೂ ಕುಪಿತರಾಗುವರು. ರಾಜನಿಗೆ ಸ್ತ್ರೀಪುರುಷರೆಂಬ ಭೇದವಿರಲಾಗದು. ಎಲ್ಲಿ ಆತ್ಮತೇಜಸ್ಸಿರುವದೊ ಅಲ್ಲಿ ಭಗವಂತನನ್ನು ಕಾಣುವುದು ಮಾನವಧರ್ಮ.

ತಾನ: ರಾಜಾ, ಪ್ರಪಂಚದ ನಡವಳಿಕೆಗಳಿಂದ ಭ್ರಾಂತನಾಗಿ ಆಡಿದ ತುಚ್ಛ ಮಾತುಗಳನ್ನು ಕ್ಷಮಿಸು. ಭಾರತದ ಸಿಂಹಾಸನವನ್ನು ಅಲಂಕರಿಸುವ ನಿನಗೆ ಧರ್ಮಬುದ್ಧಿಯು ಉಚಿತವಾದುದೇ ಸರಿ!

ಅಕ್ಬರ್: ಮಿತ್ರ, ರಾಜಾ ಎಂಬ ಪದವನ್ನು ಮೊದಲು ತ್ಯಜಿಸು. ನಮ್ಮ ವೇಷಕ್ಕನುಗುಣವಾಗಿ ಮಾತಾಡು. ಇದು ಹಿಂದೂ ದೇವಾಲಯ, ನಾವು ಹಿಂದುಗಳು.

ತಾನ: ಆಗಬಹುದು. ನನ್ನ ಮಾತಿಗಿಂತಲೂ, ನಿನ್ನ ನಡಿಗೆಯು ಗುರುತನ್ನು ಸುಲಭವಾಗಿ ಹೇಳುವುದು. ಇದರಲ್ಲಿ ನನ್ನ ಅಪರಾಧವೇನು? ಜೋಕೆ, ಈ ರಾಜಪುತ್ರ ಹುಲಿಗಳು ಯಾರೆಂಬುದನ್ನು ಬಲ್ಲೆಯಾ? ಅವರ ಸ್ತ್ರೀಯರಿಗೆ ಸ್ವಲ್ಪ ಅಪಮಾನವಾದರೆ ಶತ್ರುವಿನ ರಕ್ತವನ್ನು ಹೀರುವ ಸಾಹಸಿಗಳು. ಹಿಂದೆ ರಾಣಾ ಕುಂಭನ ಕುಲದ ಅರಸು, ತನ್ನ ರಾಣಿಯನ್ನು ನೊಡಬೇಕೆಂದು ಬಯಸಿದ ಮಹಮ್ಮದೀಯನನ್ನು ಸುಮ್ಮನೆ ಬಿಡಲಿಲ್ಲ. ಮಹಮ್ಮದೀಯನ ದೃಷ್ಟಿಯು ಸಹ ಆ ರಜಪೂತ ರಮಣಿಯ ಮೇಲೆ ಬಿದ್ದ ಮಾತ್ರಕ್ಕೆ ಕಲಂಕಿತವಾಗುವಳೆಂದು ನಂಬಿರುವ ಈ ರಜಪೂತ ರಾಜ್ಯಕ್ಕೆ ನೀನು ಹೀಗೆ ಬಂದಿರುವೆಯಲ್ಲಾ, ಎಂದು ಕಳವಳಪಡುತಿದ್ದೇನೆ!

ಅಕ್ಬರ್: ಮಿತ್ರಾ, ಭೀತನಾಗುವೆಯೇಕೆ? ಹೃದಯವು ಪರಿಶುದ್ಧವಾಗಿರುವಾಗ ಹೆದರಬೇಕೇ? ಎಲ್ಲಿ? ಮೀರಾಬಾಯಿಯ ಗಾನಗಳಲ್ಲಿ ಒಂದನ್ನು ಹಾಡು ನೋಡೋಣ.

(ತಾನಸೇನನು ಹಾಡುವನು.)

ದೃಶ್ಯ ೫.

(ಇಬ್ಬರು ಪುರುಷರ ಪ್ರವೇಶ. ತಾನಸೇನನು ಹಾಡುತ್ತಿದ್ದಾನೆ. ಅಕ್ಬರನು ನಿಂತು ಕೇಳುತ್ತಿರುವನು.)

ಗಂಗಾಧರ: ನೋಡಿದೆ ಏನಯ್ಯ ನಾನು ಹೇಳಿದ ಮಾತು? ಇಲ್ಲಿಯೇ ನಿದರ್ಶನಕ್ಕೆ ಬಂತು. ಮಹಾರಾಣಿಯು ಸಾಮಾನ್ಯಳೇ? ಈ ದೇಶದವರಷ್ಟೇ

ಅಲ್ಲದೆ, ಇತರ ದೇಶದವರು ಕೂಡಾ ಅವಳ ಗಾನವನ್ನೇ ಹಾಡುವರು. ನೀನು ಆಕೆಯನ್ನು ನೋಡಿ ಜಿಗುಪ್ಸೆ ಪಡುವೆಯಲ್ಲ!

ರಾಮು: ಸಾಕಪ್ಪ ಸಾಕು! ನಿನ್ನ ಈ ಹಾಳು ಪುರಾಣ ಕೇಳಿ ಸಾಕಾಗಿದೆ. ಶೀಘ್ರದಲ್ಲಿಯೇ ನೀನು ಕೂಡಾ ಕಾವಿಬಟ್ಟೆಯನ್ನು ಧರಿಸುವಂತಿದೆ.

ಗಂಗಾಧರ: ಅಲ್ಲಪ್ಪ, ಕಾವಿ ಧರಿಸಿದ ಮಾತ್ರಕ್ಕೆ ಯೋಗಿಗಳಾದೆವೆಂದು ಭಾವಿಸಿದೆಯಾ? ವೈರಾಗ್ಯ,ಭಕ್ತಿರಸಗಳ ಬಣ್ಣ ಬರುವದೇ ಅಸಾಧ್ಯ.

ರಾಮು: ಮೀರಾಬಾಯಿಯ ಮುಖ್ಯಶಿಷ್ಯನಾದರೆ ಆಯಿತು. ಯಾರೊ ಬರುವಂತಿದೆ. ಯಾರು ಸ್ವಾಮಿ ತಾವು? ಚಿತ್ತೂರಿಗೆ ಹೊಸಬರಂತಿದೆ.

ತಾನ: ನಾವು ಮೊಗಲ ದೇಶದ ಯಾತ್ರಾರ್ಥಿಗಳು. ಇಲ್ಲಿಯ ಸೌಭಾಗ್ಯವನ್ನು ಕಾಣಲು ಬಂದೆವು.

ಗಂಗಾ: ಹಾಗಿದ್ದರೆ ಚಿತ್ತೂರು ಯಾತ್ರಾಸ್ಥಳವಲ್ಲ. ವೃಂದಾವನವು ಸಮೀಪದಲ್ಲಿದೆ.

ತಾನ: ನಿಜ. ಅಲ್ಲಿಯಾದರೋ ಶ್ರೀ ಕೃಷ್ಣನ ವೇಣುಗಾನವನ್ನು ಕೇವಲ ಊಹಿಸಿ ಧ್ಯಾನಿಸಿ ತಿಳಿಯಬೇಕಾಗಿದೆ. ಇಲ್ಲಿ ವೇಣುನಾದವು ಹೃದಯವನ್ನು ಹೊಕ್ಕು ಆನಂದವನ್ನುಂಟು ಮಾಡುತ್ತಿದೆ. ಜ್ಞಾನಸಾಮ್ರಾಜ್ಯವನ್ನು ಹೂಡುವಂತಿದೆ. ನಾನು ಬೇರೆ ಈ ಯಾತ್ರಾಸ್ಥಳವನ್ನು ನೋಡಲು ಬಂದಿಲ್ಲ. ನನ್ನ ಮಿತ್ರನ ಅಭಿಲಾಷೆಯನ್ನು ನೆರವೇರಿಸಲು ಬಂದಿರುವೆನು.

ಗಂಗಾ: ಈತನು ಬಲು ಗಂಭೀರ ಪುರುಷನು. ಈ ತೇಜಸ್ವಿಯು ಶಕ್ತಿಯುತನಾಗಿ, ರತ್ನಾಕರನಂತಿರುವನು.

ತಾನ: ಆಯ್ಯಾ, ನನ್ನೀ ಮಿತ್ರನು, ಪೂರ್ವಜನ್ಮದಲ್ಲಿ ಚಕ್ರವರ್ತಿಯಾಗಿದ್ದಿರಬಹುದು. ಇನ್ನೂ ಆ ಸಂಸ್ಕಾರವು ಆತನಲ್ಲಿ ಕಂಗೊಳಿಸುವದು. ಆದಿರಲಿ. ನಾನು ಚತುರನಾದ ಕವಿ. ನೀನು ಬರುತಿದ್ದಾಗ, ನಾನು ರಚಿಸಿದ ಕೆಲವು ಗೀತೆಗಳನ್ನು ಹಾಡುತಿದ್ದೆನು.

ರಾಮು: ನಿಲ್ಲಿಸಿಬಿಟ್ಟಿರಲ್ಲ. ಬೇಡವಯ್ಯಾ, ಬೇಡ! ಈ ದೇಶದಲ್ಲಿ ಇಬ್ಬರಿಂದ ಉಂಟಾಗಿರುವ ಮನೋವ್ಯಾಕುಲವು ಮತ್ತು ಅವುಗಳ ಅನುಭವವೂ ಸಾಕಾಗಿರುವದು. ನಮ್ಮ ರಾಜನಿಗಾದರೋ ನಮ್ಮ ರಾಣಿಯ ನವೀನ ಗಾನಗಳನ್ನು ಕೇಳಿದಷ್ಟು ಕೋಪವೇ ಉಂಟಾಗುವದು. ರಾಜನು ರಾಣಿಯು ಪೂಜಾರಿಗಳನ್ನು ಸಹಕರಿಸುವ ಕಾಲವೂ ಒಂದಿತ್ತು. ಅದೊಂದು

ಕಾಲ; ಇಂದು ಹಾಗಿಲ್ಲ. ನೀವು ಮೊಗಲ ರಾಜ್ಯದಿಂದ ಬಂದವರೆಂದು ಹೇಳಿದಿರಾ? ಸರಿ. ಅಕ್ಬರ ಬಾದಷಹನು, ಮೀರಾದೇವಿಯ ಭಜನೆಗಳನ್ನು ಕೇಳಲು ಇಚ್ಛಿಸಿರುವನೆಂದು ಕೇಳಿರುವೆವು. ನಿಜವೆ? ನಿಮಗರಿತಿದೆಯೆ?

ತಾನ: ಒಂದು ವೇಳೆ ನಿಜವಾದರೆ?............?

ಗಂಗಾ: ಇಲ್ಲ. ಎಂದಿಗೂ ಸಾಧ್ಯವಾಗಲಾರದು. ಇದು ರಜಪೂತ ವೀರರ ದೇಶ. ಇಲ್ಲಿನ ರಾಜಪುತ್ರರ ಕುಲದ ಗೌರವದ ವಿಚಾರವನ್ನು ನೀವು ತಿಳಿದಿರಬಹುದು.

ತಾನ: ರಾಜನು ಕೇವಲ ಸಂಶಯಪರನೋ? ಒಂದು ವೇಳೆ, ಅಕ್ಬರನು ಬಂದು, ರಾಣಿಯ ದರ್ಶನ ಪಡೆದರೆ?

ರಾಮ: ಏನಾಗುವುದೋ ಹೇಳಲಾರೆ. ನಮ್ಮ ರಾಜನು ಸಾಮಾನ್ಯವೆಂದು ತಿಳಿದೆಯಾ? ರಾಣಾ ಕುಂಭನು ಕ್ಷತ್ರಿಯ ಸಿಂಹ. ಶತ್ರುಗಳ ರಕ್ತವನ್ನು ಚೆಲ್ಲಿ, ತನ್ನ ವಂಶದ ಕಳಂಕವನ್ನು ದೂರೀಕರಿಸುವ ವೀರಪುರುಷನೆಂದು ತಿಳಿ. ಕುಂಭನ ವಂಶಜರು ಗೌರವಪ್ರಿಯರು.

ಅಕ್ಬರ್: ಮಿತ್ರಾ, ಬರಿಯ ಚರ್ಚೆಯಿಂದ ಫಲವೇನು? ನಡೆ, ಮುಂದಿನ ಕೆಲಸವನ್ನು ಮಾಡುವ.

ಗಂಗಾ: ರಾಣಿಯು ದೇವಸ್ಥಾನಕ್ಕೆ ಬರುವ ಸಮಯವಾಯಿತು. ಆ ದೇವಿಯ ಮಾನಸ ಸರೋವರದಲ್ಲಿ ಅರಳಿರುವ ಗಾನವೆಂಬ ಪುಷ್ಪಗಳು ಶಾಂತಿ ಸುಗಂಧಗಳನ್ನು ಬೀರುವವು ಎಂಬುದರಲ್ಲಿ ಸಂದೇಹವಿಲ್ಲ. ಮಿತ್ರಾ, ನಡೆ, ಹೋಗುವ. ಯಾತ್ರಾರ್ಥಿಗಳೇ, ನಾವು ಇನ್ನೊಂದು ಬಾರಿ ತಮ್ಮ ದರ್ಶನವನ್ನು ಪಡೆವೆವು. (ಹೋಗುವರು)

ತಾನ: ಮಿತ್ರಾ, ನಾವು ಇಲ್ಲಿ ನಿಲ್ಲಕೂಡದು. ಪುರಜನರು—ನಿನ್ನ ಗುರುತು ಹಿಡಿಯುವರು ಎಂಬುದರಲ್ಲಿ ಸಂದೇಹವಿಲ್ಲ.

ಅಕ್ಬರ್: ಮಿತ್ರಾ, ಭೀತನಾದೆಯೇಕೆ? ನಾನು ಕೃತಕಾರ್ಯನಾಗದೆ ಇಲ್ಲಿಂದ ಹೊರಡಲಾರೆ.

ತಾನ: ನಮಗಾಗಿ ನಾನು ಹೆದರುತ್ತಿಲ್ಲ. ಆದರೆ ಸಂಶಯವೆಂಬ ಅಗ್ನಿಯು ನಿರಪರಾಧಿಯನ್ನು ದಹಿಸದೆ ಬಿಡದು. ಅದಕ್ಕಾಗಿ ಭೀತನಾಗಿರುವೆನು.

ಅಕ್ಬರ್: ಈ ಗಾನಮಾಧುರ್ಯವು ನನ್ನ ಮನಸ್ಸನ್ನು ಹೇಳಲಸದಳವಾದ ಆನಂದದಿಂದ ಉನ್ಮತ್ತನಸ್ನಾಗಿ ಮಾಡಿರುವದು. ದೂರದಲ್ಲಿ ಕೇಳಿ

ಬರುವ ಗಾನವೇ ಇಂತಹ ಮಹಿಮೆಯಿಂದ ಕೂಡಿರುವಾಗ ಆಕಾರ ರೂಪಗಳು ಇನ್ನೆಂತಹ ಶಕ್ತಿಯನ್ನು ಒಳಗೊಂಡು ಹೇಗಿರಬಹುದು ಎಂದು ಆಶ್ಚರ್ಯಪಡುತಿದ್ದೇನೆ.

ತಾನ: ನಡೆ, ಹೊರಡುವ. ಇನ್ನು ಬಹಳ ಹೊತ್ತು ನಾವಿಲ್ಲಿದ್ದರೆ ವಿನೋದಕ್ಕೆ ಬದಲಾಗಿ ಪ್ರಮಾದವೇ ಉಂಟಾದೀತು.

ಅಕ್ಬರ: ಭೀತಿ ಪಡಬೇಡ! ಮೋಹವು ಅಕ್ಬರನನ್ನು ಮೋಸ ಪಡಿಸದು. ನಾನು ಇಲ್ಲಿಗೆ ಬಂದ ಉದ್ದೇಶವನ್ನು ಈ ವರೆಗೆ ನಿನ್ನಿಂದ ಮರೆಮಾಚಿದ್ದೆನು. ಪ್ರಪಂಚದಲ್ಲಿ ಏತಕ್ಕೆ ಶಾಂತಿಯಿಲ್ಲ? ಐಶ್ವರ್ಯದಿಂದ ತುಂಬಿದ್ದರೂ ಭಾರತದ ಬಾದಷಹನಾದ ಅಕ್ಬರನ ಮನಸ್ಸಿಗೆ ನೆಮ್ಮದಿ ಇಲ್ಲವೇಕೆ? ಯೋಚಿಸಿ ನೋಡಿದಳೆ, ಚಿತ್ತೂರಿನಲ್ಲಿ ನನ್ನ ಸಂದೇಹಜನಕವಾದ ಯೋಚನೆಗೆ ಬೆಂಬಲ ದೊರೆಕೀತು. ಈ ಮಹಾನುಭಾವಳು ಈ ರಹಸ್ಯವನ್ನು ತಿಳಿದು, ಮಾಯೆಯೆಂಬ ಅಜ್ಞಾನವನ್ನು ಬೋಧಿಸಲು ಸರ್ವಶಕ್ತಳಾಗಿ ಸದಾನಂದದಿಂದಿರುವಳು. ಈ ಭಾಗ್ಯವಂತಳಿಂದ ದೇವರ ರಹಸ್ಯವನ್ನು ತಿಳಿಯುವದಕ್ಕಿಂತಲೂ ಬೇರೆ ಉದ್ದೇಶವೇನಿದೆ?

ತಾನ: ಮಿತ್ರಾ, ಇದುವರೆವಿಗೂ, ನಿನ್ನ ಹೃದಯವನ್ನೇಕೆ ಬಿಚ್ಚಿ ಮಾತಾಡದಾದೆ? ನಿನ್ನ ಶುದ್ಧ ಹೃದಯದಲ್ಲಿ ಶಂಕಿತನಾದ ನನ್ನನ್ನು ಕ್ಷಮಿಸು. ಹೀಗೆಯೆ ಅಲ್ಲವೆ, ಜನರು ಮಹಾತ್ಮರನ್ನು ದೂರಿ ಕಲುಷಿತರಾಗುವರು? (ಹೊರಡುವರು.)

ಅರಮನೆಯ ಸೇವಕ: (ಬರುತ್ತ, ಸ್ವಗತ) ಇತ್ತೀಚೆಗೆ—ಊರಿನಲ್ಲಿ ವಿಚಿತ್ರ ವಿದ್ಯಮಾನಗಳೇ ಕೇಳಬರುತ್ತಿವೆ. ಮೊದಲೇ ಮಹಾರಾಜನಿಗೆ ಕಾರಣವಿಲ್ಲದ ಆಗ್ರಹ. ಹೀಗಿರುವಲ್ಲಿ ಯಾರೊ ಯಾತ್ರಿಕನು ರಾಣಿಗೆ ರತ್ನಮಾಲಿಕೆಯನ್ನು ಕೊಟ್ಟು ಹೋಗಬಹುದೇ? ರಾಜನಾದರೂ ಕಂಡವರ ಮೇಲೆಲ್ಲಾ ಕಿಡಿಕಾರುತ್ತಿರುವನು. ಮಂತ್ರಿಗಳು ಕೂಡಾ ಕೇವಲ ಯೋಚನಾಪರರಾಗಿರುವರು. ಮಂತ್ರಿಯಾದರೊ ರತ್ನಪಡಿ ವ್ಯಾಪಾರಿಯನ್ನು ಆಸ್ಥಾನಕ್ಕೆ ಕರೆತರುವಂತೆ ಆಜ್ಞಾಪಿಸಿರುವನು. ಊರಲ್ಲಿ ಹುಡುಕುವೆನು. ಒಹೊ, ಚತುರಿಕೆ ಆತುರದಿಂದ ಬರುತ್ತಿರುವಳು!

ಚತು: ಅಯ್ಯಾ, ಮಹಾರಾಜರ ಸವಾರಿಯು ಎಲ್ಲಿರುವದು ಬಲ್ಲೆಯಾ?

ಸೇವಕ: ಖಂಡಿತವಾಗಿಯೂ ಹೇಳಬಲ್ಲೆ. ಮಂತ್ರಾಲೋಚನಾ ಗೃಹ

ದಲ್ಲಿ ಮಂತ್ರಿಯೊಡನೆ ಯೋಚನಾಪರರಾಗಿರುವರು. ಮಹಾರಾಣಿಯುವರು ಕ್ಷೇಮವಷ್ಟೆ?

ಚತು: ನಿಷ್ಕಾಮಳೂ, ಪವಿತ್ರಳೂ ಆದ ನಮ್ಮ ದೇವಿಗೆ ಕ್ಷೇಮವಲ್ಲದೆ ಮತ್ತೇನು? ನಿರಂತರದಲ್ಲಿಯೂ, ಭಜಿಸುವಂತಹ ಭಗವಂತನೇ ಮಂಗಳವನ್ನುಂಟುಮಾಡುವನು. ಮಹಾರಾಜರ ಸಮಯುವನ್ನು ತಿಳಿದು ಬರುವಂತೆ ದೇವಿಯು ಆಜ್ಞೆಯಾಗಿದೆ.

ಸೇವಕ: ಹಾಗಾದರೆ ಮಹಾರಾಜನ ಕೋಪವು ಕಡಿಮೆಯಾಗಿರುವುದು. ಹೇಗಾದರೂ ಅವರಿಬ್ಬರೂ ಕ್ಷೇಮದಿಂದಿದ್ದರೆ ತಾನೆ ಮಿಕ್ಕವರ ಪಾಡು? ಚತುರಿಕೆ, ಮಹಾರಾಜರ ಆಗ್ರಹಕ್ಕೆ ಕಾರಣವೇನು?

ಚತು: ಕಾರಣವೇ? ಆತನ ಸಂಶಯಪೂರಿತವಾದ ಹೃದಯ. ಆ ಭಾಗವತೋತ್ತಮಳಲ್ಲಿ ದೋಷವನ್ನೆಣಿಸುವ ಮಹಾರಾಜನು ಸತ್ಯಸ್ವರೂಪವನ್ನರಿತವನಲ್ಲ. ಇನ್ನು ನಾನು ಸಾವಕಾಶಮಾಡುವಂತಿಲ್ಲ.

ಸೇವಕ: ನಾನು ರತ್ನಪುಡಿ ವ್ಯಾಪಾರಿಯನ್ನು ಕರೆತರಲು ಹೋಗುವೆ.

(ಹೋಗುವರು.)

ದೃಶ್ಯ ೬.

(ರಾಣಾಕುಂಭನ ಮಂತ್ರಾಲೋಚನಾ ಗೃಹ. ಮಂತ್ರಿಗಳು ಮತ್ತು ಕುಂಭನು ಕುಳಿತಿರುವರು. ರಾಣಿ ಮೀರಾಬಾಯಿಯು ಪ್ರವೇಶಿಸುವಳು.)

ರಾಣಾ: ಮಂತ್ರಿ, ನೀನು ಈಗಲೇ ಹೋಗಿ ನಮಗೆ ವರ್ತಮಾನ ಕಳುಹಿಸಿದ ಪುರಜನರಿಬ್ಬರನ್ನು ಬರಮಾಡು.

ಮಂತ್ರಿ: ಅಪ್ಪಣೆ ಪ್ರಭೂ! (ಹೊರಡುವನು.)

ರಾಣಾ: ಹಾಗೆಯೇ, ನಮ್ಮ ಪುರದಲ್ಲಿ, ರತ್ನವ್ಯಾಪಾರ ಮಾಡುತ್ತಿರುವ ವೀರಸೇನನನ್ನು ಬರಮಾಡು.

ಮೀರಾ: ಆಹಾ! ಕಾಲ ಮಹಿಮೆಯೇ! ಮಹಾರಾಜನು ನನಗೆ ಎಂದೂ ಈ ರೀತಿ ಅಪಮಾನಪಡಿಸಿದ್ದಿಲ್ಲ! ಎಲ್ಲಿಯೋ ಇರಲಿ, ಅರ್ಧಾಂಗಿಯಾದ ನನಗೆ ಅರ್ಧಾಸನ ವಿಾಸಲಾಗಿರುತಿತ್ತು. ಆದರೆ............ಇಂದು? ಇರಲಿ. ನಾನು ಗೌರವವನ್ನಪೇಕ್ಷಿಸುವುದೇ ತಪ್ಪು!

ರಾಣಾ: ನನಗೆ ವಿಶೇಷ ಮಾತನಾಡುವದಕ್ಕೆ ಸಮಯವಿಲ್ಲವಾದ ಕಾರಣ ನೀನು ಬಂದ ಕಾರಣವನ್ನು ಬೇಗನೆ ತಿಳಿಸು.

ವೀರಾ: ರಾಜ, ನನ್ನೊಡನೆ ಮಾತನಾಡಲು ಎಷ್ಟು ಜನ್ಮಗಳು ದೊರೆತರೂ ಕಾಲಾವಕಾಶವು ಸಾಲದೆಂದು ಹೇಳುತ್ತಿರಲಿಲ್ಲವೇ? ಇರಲಿ. ಭಕ್ತನೊಬ್ಬನಿಂದ ಕಾಣಿಕೆಯಾಗಿ ಬಂದ ರತ್ನಮಾಲಿಕೆಯನ್ನು ತರಿಸಿಕೊಂಡ ಕಾರಣವನ್ನು ತಿಳಿಯಲು ಬಂದಿರುವೆನು.

ರಾಣಾ: ಅದು ನನ್ನ ಇಷ್ಟ. ಆ ವಿಚಾರವಾಗಿ ನೀನು ಪ್ರಶ್ನೆ ಮಾಡಬೇಕಾದ ಪ್ರಮೇಯ ಬಂದಿಲ್ಲ.

ವೀರಾ: ಪ್ರಭೂ, ನಮ್ಮಿಬ್ಬರ ಮನಸ್ಸುಗಳು ಬೇರೆ ಬೇರೆ ರೂಪಗಳನ್ನು ಹೊಂದಿರುವವು. ಇದೇ ಮೊದಲಬಾರಿ ನಿಮ್ಮ ಮಾತುಗಳು ನನ್ನ ಹೃದಯವನ್ನು ಭೇದಿಸುವ, ಸೀಸದ ಗುಂಡುಗಳಂತಿರುವವು. ಇಷ್ಟು ಆಗ್ರಹಕ್ಕೆ ನಾನು ಪಾತ್ರಳೇಕೆ?

ರಾಣಾ: ತಡೆಯಿಲ್ಲದ ಮಾರ್ಗದಲ್ಲಿ, ಸ್ವೇಚ್ಛೆಯಾಗಿ ಹೋಗುವುದೇ ನಿನ್ನ ಮತವಾಗಿರುವಾಗ ನಾನೇಕೆ ಅಡ್ಡ ಬರಲಿ? ನಿನ್ನ ಮನ ಬಂದಂತೆ ವರ್ತಿಸಲು ಸರ್ವಸ್ವಾತಂತ್ರ್ಯವನ್ನು ಕೊಟ್ಟಿರುವೆನು. ಇದಕ್ಕಿಂತಲೂ ಹೆಚ್ಚಾಗಿ ನಾನೇನನ್ನು ತಾನೆ ಮಾಡಬಲ್ಲೆ?

ವೀರಾ: ಸ್ವಾಮಿ, ಇಂತಹ ಪ್ರೀತಿರಹಿತ ಸ್ವಾತಂತ್ರ್ಯದಿಂದ ಫಲವೇನು? ನಿಜವಾದ ಪ್ರೇಮವು ಬಂಧನವೆನಿಸಿಕೊಂಡರೂ, ಯಾತನಾ ರೂಪವಾದುದಲ್ಲ. ಆದುದರಿಂದ ನಿಮ್ಮ ಹೃದಯದಲ್ಲುಂಟಾದ ಕಾಠಿಣ್ಯಕ್ಕೆ ಪ್ರಬಲವಾದ ಮತ್ತಾವುದೋ ಕಾರಣವಿರಬೇಕು.

ರಾಣಾ: ನಿನಗೆ ರತ್ನಮಾಲಿಕೆಯನ್ನು ಕೊಟ್ಟವನಾರು?

ವೀರಾ: ಯಾರೂ ಅದನ್ನು ಕೇಳುವ ಅವಶ್ಯಕತೆಯೇ ಇಲ್ಲವಲ್ಲ? ಯಾವ ಪರಮಪುರುಷನು ಕಾರ್ಯರೂಪದಿಂದ ಈ ಪ್ರಪಂಚವನ್ನು ಕಾಪಾಡುವನೋ ಆ ಪರಮಾತ್ಮನು ಯಾತ್ರಿಕನ ರೂಪದಿಂದ ಬಂದು ನಿಮಿಷಮಾತ್ರದಲ್ಲಿ ದಾಸಿಗೆ ದರ್ಶನವಿತ್ತು ಮರೆಯಾಗಿ ಹೋದನು. ಮತ್ತೆ ಆ ಮಂಗಳಮೂರ್ತಿಯ ದರ್ಶನವು ನನಗಾಗಲಿಲ್ಲ!

ರಾಣಾ: (ಕೋಪದಿಂದ) ಮಾಯಾವಿನಿ! ನಿನ್ನ ಕಪಟ ನಾಟಕಕ್ಕೆ ಮುನ್ನುಡಿಯನ್ನಾರಂಭಿಸಿದೆಯಾ? ನಿನ್ನ ಇಂತಹ ಕಥೆಗಳನ್ನು ಕೇಳಿ ಬೇಸರವಾಗಿದೆ. ಆ ದಿನ ನಿನ್ನ ಶಯ್ಯಾಗಾರದಲ್ಲಿ ಮಾತಾಡುವ ಧ್ವನಿಯನ್ನು ಕೇಳಿ ಯಾರೆಂದು ವಿಚಾರಿಸಿದಾಗಲೂ ನೀನು ಕೊಟ್ಟ ಉತ್ತರ ಇದೇ ಯಲ್ಲವೇ? ಇಂತಹ ಮೋಸದಿಂದ ನೀನು ಹೆಚ್ಚು ಕಾಲ ಇನ್ನು

ವಂಚಿಸಲಾರೆ! ಎಲ್ಲರೆದುರಿಗೂ ನಿಷ್ಕಾಮ ಭಕ್ತಳೆನಿಸಿಕೊಂಡು ವಿಷಯ ಸುಖಗಳನ್ನು ತೊರೆದವಳೆನಿಸಿಕೊಂಡ, ರಹಸ್ಯದಲ್ಲಿ ವಿಷಯಲಂಪಟಳಾಗಿರುವೆ! ಕಳಂಕಿತಳಾದ ನಿನ್ನ ದರ್ಶನಮಾತ್ರದಿಂದಲೇ ನನ್ನ ಕಣ್ಣುಗಳು ಉರಿಯುತ್ತಿರುವವು ಮೇವಾಡದ ರಜಪೂತ ರಾಜವಂಶಕ್ಕೆ ಕಳಂಕವನ್ನು ತಂದೊಡ್ಡಿದ ಪಾಪಿ! ಹೇಗೆ ಈ ಕಳಂಕವನ್ನು ಹೋಗಲಾಡಿಸಿಕೊಳ್ಳಲಿ!

ಮೀರಾ: ಪತಿದೇವಾ, ಒರಿಯ ಆಗ್ರಹವೇಕೆ? ಯಾವ ವಿಧದಲ್ಲೂ ನಾನು ಪಾಪಿಯಲ್ಲ! ನನ್ನ ಹೃದಯದಲ್ಲಿ ಕಳಂಕವಿಲ್ಲ. ನಾನು ನಿಮಗೆ ಎಂದಿಗೂ ಮೋಸವನ್ನು ಬಗೆದಿಲ್ಲ ಪವಿತ್ರವಾದ ಪ್ರೇಮದಿಂದ ತುಂಬಿರುವ ನಿಮ್ಮ ಹೃದಯವು ಕಾಠಿಣ್ಯವನ್ನು ತಾಳಬಹುದೇ? ಹೇಗೆ ನಿಮಗೆ ನಂಬಿಗೆಯನ್ನುಂಟುಮಾಡಲಿ? ಈ ತನುಮನಗಳು ನಿಮ್ಮ ಅಧಿಕಾರಕ್ಕೊಳಪಟ್ಟವೆ! ಸಂದೇಹವು ನಿಮ್ಮ ಹೃದಯದಲ್ಲಿ ನೆಲಸಿರುವದರಿಂದ ಹೇಗೆ ದೋಷವೆಣಿಸಲಿ? ನಿಮ್ಮ ಪವಿತ್ರವಾದ ಪ್ರೇಮವು ಹೀಗೆ ಕಳೆಗುಂದಬಹುದೇ? ಕಾಠಿಣ್ಯವನ್ನು ತಾಳಬಹುದೇ?

ರಾಣಾ: ನಿನ್ನ ದಯವು ನನಗೆ ಬೇಕಿಲ್ಲ ನನಗೆ ಬೇಕಾದುದು, ಸತ್ಯ-ಸಂಕಲ್ಪ, ಅದನ್ನು ಹೇಳು.

ಮೀರಾ: ನಿಜವನ್ನೇ ಹೇಳಿರುವೆನಲ್ಲವೇ? ಇನ್ನು ಸಂಶಯವೇಕೆ?

ರಾಣಾ: ಪಾತಕೀ! ನಿನ್ನ ಹೃದಯವನ್ನೆಲ್ಲಾ ಶೋಧಿಸಿಬಿಡುತ್ತೇನೆ! ನೀನು ದೋಷರಹಿತಳಾಗಿದ್ದರೆ—

ಮೀರಾ: ಇದ್ದರೆ ಸಂಶಯವೇಕೆ? ನಿಮ್ಮ ಸಂಶಯಪಿಶಾಚಿಯು ಹೃದಯವನ್ನು ಭೇದಿಸುವ ಕಠಾರಿಯಂತಿರುವುದು.

ರಾಣಾ: ಹೃದಯ ಶುದ್ಧವಾಗಿದ್ದರೆ ಶಂಕಿಸುವದೇಕೆ? ಕಳಂಕವಿಲ್ಲದಲ್ಲಿ ಹೇಗೆತಾನೆ ನೋವಾದೀತು?

ಮೀರಾ: ಹಾಗಲ್ಲ. ಪ್ರೇಮಮಯನಾದ ಪತಿಯೇ ಸಂದೇಹ ದೃಷ್ಟಿಯನ್ನಿರಿಸಿದಾಗ ನೋವಾಗದೆ ಇರಲು ಸಾಧ್ಯವೆ?

ರಾಣಾ: ರಾಜನಾದವನು ಧರ್ಮ ತಪ್ಪಿದವರಿಗೆ ಶಿಕ್ಷೆಯನ್ನು ವಿಧಿಸಿ ಧರ್ಮವನ್ನುಳಿಸುವದು ಸೂಕ್ತವಾಗಿದೆ. ಈ ರತ್ನಮಾಲಿಕೆಯೇ ನಿನ್ನನ್ನು ದೋಷಿಯನ್ನಾಗಿರಿಸಿರುವದು. ಹೀಗಿರುವಾಗ ಹೇಗೆತಾನೆ ನೀನು ಪರಿಶುದ್ಧಳೆಂದು ನಂಬಲಿ? ನನ್ನ ಕಾರ್ಯವನ್ನು ನಾನು ಮಾಡಿಯೇ ತೀರಬೇಕು.

ಮೀರಾ: ನಿಮ್ಮ ಕರ್ತವ್ಯವು ಈ ರೀತಿಯಾಗಿ ನಿಮ್ಮಲ್ಲಿ ಕಾಠಿಣ್ಯವನ್ನು ತುಂಬಿದ್ದರೂ ನಿಮ್ಮ ಹೃದಯದಲ್ಲಿರುವ ಪ್ರೇಮಜ್ಯೋತಿಯನ್ನು ನಾನು

ಬಲ್ಲೆ ಆದರೆ, ನಿಮ್ಮ ಹೃದಯದಲ್ಲಿ ಸಂಶಯವೆಂಬ ಸರ್ಪಕ್ಕೆ ಆಕಾರವನ್ನು ಕಲ್ಪಿಸಿರುವಿರಿ. ನಿಮ್ಮ ಪ್ರೇಮಕ್ಕೆ ಪಾತ್ರಳಾಗಿ ಶೀತಲ ಚಂದ್ರಕಾಂತಿಯಲ್ಲಿ ಪರಮಾತ್ಮನನ್ನು ಧ್ಯಾನಿಸುತ್ತ ಇದ್ದ ದಿನವನ್ನು ಜ್ಞಾಪಿಸಿಕೊಳ್ಳಿ. ಅಂದಿನ ಪವಿತ್ರ ಪ್ರೇಮಕ್ಕೆ ಇಂದು ಕಳಂಕವು ತಟ್ಟೀತೆ? ಇಲ್ಲ, ಇದೆಲ್ಲ ಮಾಯೆಯೆಂದೂ, ವಿನೋದವೆಂದೂ ತಿಳಿಯುವ ಕಾಲವು ಬಂದೀತು.

ರಾಣಾ: (ಕೋಪದಿಂದ) ನಿನ್ನ ಕಪಟ ಮಾತುಗಳನ್ನು ಏಕೆ ವೃಥಾ ಬೆಳೆಸುತ್ತಿರುವೆ? ನೀನು ಈಗಲೇ ಇಲ್ಲಿಂದ ಹೊರಡು. ನಿನ್ನೊಡನೆ ಹರಟೆ ಯಾಡಲು, ನನಗೆ ಬಿಡುವಿಲ್ಲ.

ಮೀರಾ: ಆಹಾ! ನನ್ನೊಡನೆ ಮಾತನಾಡಲು ಸಮಯವಿಲ್ಲ! ಸತ್ಯ ಮೂರ್ತಿಯಾದ ಪರಮಾತ್ಮನನ್ನು ತಿಳಿಯುವ ಶಕ್ತಿ ಇಲ್ಲದವರಿಗೆ ದೋಷ, ಕಳಂಕಗಳೇ ಕಾಣಬರುವವು. ದೇವಾ, ನನ್ನ ಪತಿಯಲ್ಲಿ ಹೆಡೆಯಾಡುತ್ತಿ ರುವ ವಿಷಸರ್ಪವನ್ನು ಹೊಡೆದೋಡಿಸು! (ಹಾಡುವಳು)

(ಮಂತ್ರಿಗಳೂ ಪುರಜನರೂ ಬಂದು ಗಾನಚಾತುರ್ಯವನ್ನು ಕಂಡು ಮೀರಾ ದೇವಿಗೆ ವಂದಿಸಿ ನಿಲ್ಲುವರು.)

ರಾಣಾ: ಇಲ್ಲಿ ಎಲ್ಲರೂ ಬಂದಿರುವರೇ?

ಮಂತ್ರಿ: ಎಲ್ಲರೂ ಸಿದ್ಧರಾಗಿ ಪ್ರಭುವಿನಾಜ್ಞೆಯನ್ನು ಸಲಿಸಲು ತವಕದಿಂದಿರುವೆವು ಆ ರತ್ನಮಾಲಿಕೆಯನ್ನು ಅಕ್ಬರ್ ಬಾದಷಹನಿಗಾಗಿ ಮಾಡಿರುವುದಾಗಿ ವೀರಸೇನನು ಹೇಳುತ್ತಿರುವನು.

ರಾಣಾ: ಪ್ರಜೆಗಳೇ, ನಿಮಗೆ ತಿಳಿದ ವಿಷಯಗಳನ್ನು ಮರೆಮಾಚ ದಂತೆ ಕೂಲಂಕಷವಾಗಿ ವಿವರಿಸಿ ಹೇಳಿರಿ.

ಗಂಗಾಧರ: ಪ್ರಭು! ಧ್ಯಾನಾಸಕ್ತಳಾಗಿರುವ ದೇವಿಯವರು, ಹೂವು ಗಳೇ ಆ ರತ್ನಮಾಲಿಕೆಯಾಗಿ ಪರಿವರ್ತನೆ ಹೊಂದಿರುವರಾಗಿ ತಿಳಿದಿರು ವರು. ಆದರೆ ಮೊಗಲದೇಶದ ಯಾತ್ರಿಕನು ಕೊಟ್ಟುಹೋಗಿರುವುದಾಗಿ ನಾನು ತಿಳಿದಿರುವೆನು.

ರಾಣಾ: ಅವನು ಮೊಗಲದೇಶದವನೆಂದು ಹೇಗೆ ಬಲ್ಲಿರಿ?

ರಾಮು: ಅವರಾಗಿಯೇ ಹೇಳಿದರು ಪ್ರಭು! ಗಾಂಭಿರ್ಯದಲ್ಲಿ, ಮಾತಿನಲ್ಲಿ ಅವನೇ ಅಕ್ಬರನಾಗಿರಬಹುದೆಂದು ಸಂದೇಹಬಲವಾಗುತ್ತಿದೆ ಮಹಾ ಪ್ರಭೂ!

ರಾಣಾ: ಏನು, ನಿಮಗೆ ಸಂದೇಹ ಉಂಟಾಗಿರುವುದುವದೇ? ಅಕ್ಬ ರನು ಕಳ್ಳನಂತೆ ವೇಷಧಾರಿಯಾಗಿ ಬಂದು, ರಜಪೂತ ರಮಣಿಯನ್ನು....?

ಮಂತ್ರಿ: ಪ್ರಭೂ, ಇದಕ್ಕೆ ಚಿಂತಿಸಲಾಗದು. ನಿಮಗೆ ಅಪಮಾನ

ಮಾಡಿದ ಅಕ್ಬರನು ಕ್ಷಣಕಾಲವೂ ಬದುಕಿರಬಾರದು. ನಾನು ಇದಕ್ಕಾಗಿ ಒಂದು ಪರಿಹಾರವನ್ನು ಸೂಚಿಸುವೆ.

ರಾಣಾ: ಏನು, ಅಕ್ಬರನ ಪ್ರಾಣಹಾನಿಯಿಂದ ರಜಪೂತವಂಶಕ್ಕೆ ಬಂದಿರುವ ಕಲಂಕವು ತೊಲಗುವದೇ? ಅವನಿಂದ ಕಾಣಿಕೆಯನ್ನು ಸ್ವೀಕರಿಸಿದ ಕುಲಘಾತಕಿಯನ್ನು ಮೊದಲು ಶಿಕ್ಷಿಸಬೇಕು.

ಮಂತ್ರಿ: ಅಂದರೆ ರಾಣಿಯನ್ನೇ........?

ರಾಣಾ: ಅಹುದು, ಚಿತ್ತೂರಿನ ಧವಳ ಕೀರ್ತಿಗೆ ಕಳಂಕವನ್ನುಂಟು ಮಾಡಿದ ಅವಳು ಕ್ಷಣಕಾಲವೂ ಬದುಕಲಾಗದು. ಅದಕ್ಕಾಗಿ ಸರ್ವಸಿದ್ಧತೆಗಳನ್ನೂ ಮಾಡು.

ಮಂತ್ರಿ: ಸ್ವಾಮಿನ್! ಆಲೈಸಬೇಕು. ಮಹಾರಾಣಿಯವರ ಶೀಲವನ್ನು ಶಂಕಿಸುವದು ಸರ್ವಥಾ ಸರಿಯಲ್ಲ. ಪರಿಶುದ್ಧಾತ್ಮರಾದ ಮೀರಾದೇವಿಯವರ ನಾಮವನ್ನು ಉಚ್ಚರಿಸಿದ ಮಾತ್ರಕ್ಕೆ ಎಲ್ಲ ಆಪತ್ತುಗಳೂ ಪರಿಹಾರವಾಗುತ್ತಿರುವಲ್ಲಿ, ಈ ತಂದ ಘೋರ ಆಜ್ಞೆಯನ್ನು ಮಾತ್ರ........

ರಾಣಾ: ಏನು, ನನ್ನ ಆಜ್ಞೆಯನ್ನು ನೆರವೇರಿಸುವದಿಲ್ಲವೇ?

ಮಂತ್ರಿ: ನಿಮ್ಮ ಹಿತಕ್ಕಾಗಿಯೇ ಈ ಆಜ್ಞೆಯನ್ನು ನೆರವೇರಿಸಲಾರೆ!

ರಾಣಾ: ಆಜ್ಞಾಭಂಗದಿಂದ ಉಂಟಾಗುವ ಶಿಕ್ಷೆ ತಿಳಿದಿರಲಿ!

ಮಂತ್ರಿ: ವಿಶ್ವಾಸಘಾತಕನಾಗಿ ಈ ಪ್ರಾಣವನ್ನು ಧರಿಸಿರುವದಕ್ಕಿಂತಲೂ ಶಿಕ್ಷೆಯನ್ನನುಭವಿಸುತ್ತಾ ಸಾಯುವುದು ಬಹಳ ಸಂತೋಷವಾಗಿದೆ!

ರಾಣಾ: ವೀರಸೇನಾ, ನಿರ್ಜೀವವಾದ ಕಲ್ಲುಗಳನ್ನು ಚಿನ್ನದಲ್ಲಿ ಸೇರಿಸಿ, ಅತಿಶಯ ಕಾಂತಿಯುಕ್ತ ಕಲ್ಲುಗಳನ್ನಾಗಿಸುವ ನೀನು ಪ್ರಪಂಚದಲ್ಲಿ ದೋಷವೆಂದು ಆತ್ಮಕಾಂತಿಯನ್ನು ಆಚ್ಛಾದಿಸುವದನ್ನು ಶುದ್ಧಿಗೊಳಿಸಲು ಸಹಕಾರಿಯಾಗುವೆಯಾ?

ವೀರಸೇನ: ಮಹಾರಾಜ, ಯಾವ ಪೂಜ್ಯಳು ಚಿತ್ತೂರಿನ ಪ್ರಜೆಗಳ ಹೃದಯಗಳನ್ನೇ ಕಳಂಕರಹಿತವನ್ನಾಗಿಸಿ ಭಕ್ತಿರಸದಿಂದ ತುಂಬಿರುವಳೋ ಅಂತಹಳಲ್ಲಿ ದೋಷವೆಣಿಸಲು ನಾನು ಎಷ್ಟರವನು?

ರಾಣಾ: ಈಗ ಅವಳ ಪರಿಶುದ್ಧತೆಯೂ ಓರ್ವ ಯುವನನಿಂದ ಕಳಂಕಿತವಾಗಿರುವದು.

ವೀರ: ರಾಜ, ಲೋಕವನ್ನೇ ಬೆಳಗುವ ಸೂರ್ಯನ ಕಾಂತಿಯ ಎದುರು ಕತ್ತಲೆಯು ನಿಲ್ಲಲಾರದು. ಅಂತೆಯೇ ಮೀರಾಬಾಯಿಯು ಧ್ಯಾನದಲ್ಲಿರುವಾಗ ಕಲಂಕವೆಲ್ಲಿ ಬಂತು?

ರಾಣಾ: ಆಜ್ಞಾಭಂಗದ ಶಿಕ್ಷೆಯನ್ನನುಭವಿಸಲು ಸಿದ್ಧನಾಗಿರು!

ವೀರಸೇನ: ಆಗಲಿ ಮಹಾಪ್ರಭು! ನಿಮ್ಮ ಆಜ್ಞೆಯನ್ನು ಸಂತೋಷ ದಿಂದ ಎದುರು ನೋಡುತ್ತಿರುವೆನು!

ರಾಣಾ: ಪುರಜನರೇ, ನನ್ನ ಪರಿವಾರವೇ ನನ್ನನ್ನು ತ್ಯಜಿಸುವಂತಾ ದರೂ ಚಿತ್ತೂರಿನ ಪ್ರಜೆಗಳಿಗೆ ನನ್ನ ರಾಣಿಯು ಭಕ್ತಶ್ರೇಷ್ಠಳಾಗಿ ತೋರಿ ದರೂ, ನ್ಯಾಯನಿಷ್ಠನಾದ ರಾಣಾಕುಂಭನು ಕೇವಲ ಕಾಮುಕನೂ ದ್ರೋಹಿ ಯೂ ಆಗಿ ಪರಿಣಮಿಸಬೇಕಾದೀತು. ಈ ಹಾನಿಯಿಂದ ವಂಶಕ್ಕೆ ಬಂದಿ ರುವ ಕಳಂಕವನ್ನು ಹೋಗಲಾಡಿಸದೆ ಮನಸ್ಸಿಗೆ ನೆಮ್ಮದಿ ದೊರೆಯದು. ನೀವೆಲ್ಲರೂ ಧರ್ಮಬುದ್ಧಿಯಿಂದ ನನ್ನ ಆಜ್ಞೆಯನ್ನು ನೆರವೇರಿಸಿರಿ! ನನ್ನ ಆಜ್ಞೆಯನ್ನು ಬರೆದಿಟ್ಟಿರುವೆನು. ರಾಣಿಯು ನನ್ನ ಆಜ್ಞೆಯಂತೆ ತನ್ನನ್ನು ತಾನೆ ನಾಶಮಾಡಿಕೊಳ್ಳಲಿ!

ಗಂ: ನ್ಯಾಯಪರಳಾದ ರಾಣಿಯು ಧರ್ಮಸಮ್ಮತವಾದುದನ್ನು ನಿರ್ಣಯಿಸಲಿ!

ರಾಣಾ: (ಚಿಂತಿಸುತ್ತಾ) ಮನಸ್ಸಿಗೆ ನೆಮ್ಮದಿಯಾಯಿತು. ನನ್ನ ಕೋಪಾಗ್ನಿಗೆ ನನ್ನ ಪ್ರಿಯಳನ್ನು ಬಲಿಕೊಟ್ಟಂದಾಯಿತು. ಆದರೆ ಮಾಡು ವದೇನು? ರಾಜ್ಯದಲ್ಲಿ ಶಾಂತಿಯಿಲ್ಲ ಮೀರಾಳನ್ನು ಈಗ ಕ್ಷಮಿಸುವೆ. ಆದರೆ ಮೊಗಲನು ರಜಪೂತ ರಮಣಿಯನ್ನು ಅಪವಿತ್ರಳನ್ನಾಗಿ ಮಾಡಿದ ನಲ್ಲ! ಏನೋ ಮನಸ್ಸಿಗೆ ಕಳವಳ, ಸಂತಾಪ! ಸಮಾಧಾನವಿಲ್ಲ! (ಫರದೆ)

ದೃಶ್ಯ ೭.

ಮೀರಾಬಾಯಿಯು ಶ್ರೀ ಕೃಷ್ಣನ ವಿಗ್ರಹದ ಮುಂದೆ ಆವೇಶದಿಂದ ಹಾಡುತ್ತಿರುವಳು. ಹಲವು ಸಂತರೂ ಭಕ್ತರೂ ನೆರೆದಿರುವರು. ಘಂಟಾನಾದ ವಾಗುತ್ತಿರಲು, ಮೀರಾ ಆವೇಶದಿಂದ ಹಾಡುತ್ತ ಹಾಡುತ್ತ, ದೇಹಬಲವುಡುಗಿ, ವಾಲಿ, ಬಿದ್ದು ಬಿಡುವಳು. ಘಂಟಾನಾದವು ಸ್ವಲ್ಪ ಕಡಿಮೆಯಾಗುವುದು. "ಮೀರಾ ಶ್ರೀ ಕೃಷ್ಣನಲ್ಲಿ ಐಕ್ಯಳಾದಳು" ಎಂಬ ಘೋಷವೇಳುವುದು.

ಮೆಲ್ಲನೆ ತೆರೆ ಇಳಿಯುತ್ತಿರಲು, ಘಂಟಾನಾದವು ನಿಂತು, "ಜನ ಗಣ ಮನ ಗೀತ" ಹಾಡಲ್ಪಡುವುದು.


ಸಸ್ಯಜಗತ್ತಿನಲ್ಲಿ!

ಸದಾ ಶಾಂತ, ರಮ್ಯ ಹಸುರು, ಕಣ್ಣಿಗೆ ತಂಪು—ಆದರೆ, ಸದಾ ಚೈತನ್ಯ ತುಂಬಿಕೊಂಡಿದೆ,—ಇದುವೇ ಸಸ್ಯಜಗತ್ತು. ಇಲ್ಲೀ ನೈಸರ್ಗಿಕ ಸೌಂದರ್ಯದ ಪರಾಕಾಷ್ಠೆ.

ಸಸ್ಯ ಜಗತ್ತಿನಲ್ಲಿ, ಉಳಿಕೆಯ ಗುಣವೇ ಪ್ರಧಾನವಾಗಿದೆ. ಬೀಜಗಳಲ್ಲಿ, ಫಲಗಳಲ್ಲಿ, ಕಾಂಡದಲ್ಲಿ, ಬೇರಿನಲ್ಲಿ ಸಸ್ಯಗಳು ಆಹಾರ ಕೂಡಿಡಲಾರವಾದರೆ, ಚತುಷ್ಪಾದ ಪ್ರಾಣಿಗಳಾಗಲಿ ಮನುಷ್ಯರಾಗಲಿ ಬದುಕುವುದೇ ಸಾಧ್ಯವಾಗದು.



ಬಟಾಟೆಯೂ ಮರಗೆಣಸೂ ನೆಲದಡಿಯ ಕಾಂಡದಲ್ಲಿ ತಮ್ಮ ಆಹಾರವನ್ನು ಸಂಗ್ರಹಿಸುವುವು. ಮರುವರ್ಷ, ಮರಿಸಸ್ಯಗಳು ಅವುಗಳ ಕಾಂಡಗಳಿಂದ ಉಳಿಕೆಯ ಆಹಾರ ಪಡೆದು ಬೆಳೆಯುವುವು.



ತೆಂಗಿನ ಕಾಯಿಯಲ್ಲಿ ಈ ಆಹಾರವು ತಿರುಳಿನಲ್ಲಿ ಕೂಡಿಡಲ್ಪಟ್ಟಿದೆ. ಅಲ್ಲಿಂದಲೇ ತೆಂಗಿನ ಹೊಸ ಮೊಳಕೆಗೆ ಆಹಾರ ದೊರೆಯುತ್ತದೆ; ಅದರ ರಕ್ಷಣೆಯೂ ಆಗುತ್ತದೆ.

ಉಳಿಸುವ ಉಪಾಯವು ಉಳಿಯುವ ಉಪಾಯವಾಗಿದೆ.

ನಿಮ್ಮ ಹಣವನ್ನು ಸಿಂಡಿಕೇಟ್ ಬೇಂಕಿನ
'ಪಿಗ್ಮಿ' ಠೇವಣಾತಿಯಲ್ಲಿರಿಸಿ, ಉಳಿಸಿ, ಬೆಳೆಸಿರಿ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿ.,
ಹೆಡ್ ಆಫೀಸು: ಉಡುಪಿ—
ಅಥವಾ ನಿಮ್ಮೂರಲ್ಲಿರುವ ಶಾಖೆಗಳಲ್ಲಿ ವಿಚಾರಿಸಿರಿ.

THE CANARA INDUSTRIAL & BANKING SYNDICATE, LTD.

Edited, Printed & Published by K. V. Shenoy
at The Prabhat Printers, Ltd., Mangalore.